ಸಂಪುಟ 01 | ಸಂಚಿಕೆ 53 | ಶನಿವಾರ 03 ಜನವರಿ 2026 | ಪುಟ 4 | ಬೆಲೆ-2 ರೂ.

ಇರ್ಫಾನ್ ಕೆ
ಸಂಪಾದಕರು

M A ವಹಾಬ್
ಪ್ರಧಾನ ಸಂಪಾದಕರು

# ನೈಜ್ಯ ದೆಸೆ

NAIJYA DESE

ಸತ್ಯದ ದಿಕ್ಕು TRUE PATH

ಕನ್ನಡ ದಿನ ಪತ್ರಿಕೆ

ಸಿಂಧನೂರು, ಮಸ್ಕಿ ಮಾನ್ವಿ, ಲಿಂಗಸೂರು, ರಾಯಚೂರ,ದೇವದುರ್ಗ ಬಳ್ಳಾರಿ, ಕೊಪ್ಪಳ ಯಾದಗಿರಿ, ಕಲಬುರ್ಗಿ, ಬೀದರ, ವಿಜಯಪುರ. ಗದಗ, ವಿಜಯನಗರ. ಏಕಕಾಲಕ್ಕೆ ಪ್ರಕಟಣೆ

REGIONAL KANNADA DAILY MORNING

RNI code: KNKAN/25/A3581 ಮೋ: 9902277588, 9880707587, 9008787586 naijyadese@gmail.com

## ಈ ದಿನದ ವಿಶೇಷ

1)ಸಾವಿತ್ರಿಬಾಯಿ ಫುಲೆ ಜಯಂತಿ

ಸಾವಿತ್ರಿಬಾಯಿ ಫುಲೆ ಅವರು ಭಾರತದ ಮೊದಲ ಮಹಿಳಾ ಶಿಕ್ಷಕಿ, ಸಮಾಜ ಸುಧಾರಕಿ ಹಾಗೂ ಮಹಿಳಾ ಶಿಕ್ಷಣದ ಮುಂಚೂಣಿ ನಾಯಕಿ. ಮಹಿಳೆಯರು ಮತ್ತು ದಲಿತರ ಶಿಕ್ಷಣಕ್ಕಾಗಿ ಅವರು ಮಾಡಿದ ಸೇವೆಗಳು ಇಂದಿಗೂ ಪ್ರೇರಣೆಯಾಗಿದೆ.

2) ಅಂತರರಾಷ್ಟ್ರೀಯ ಮನಸ್ಸು–ದೇಹ ಕಲ್ಯಾಣ ದಿನ

ಈ ದಿನವು ಮನಸ್ಸು, ದೇಹ ಮತ್ತು ಭಾವನೆಗಳ ನಡುವಿನ ಆಳವಾದ ಸಂಬಂಧವನ್ನು ಗೌರವಿಸುವುದಕ್ಕೂ, ಸಮಗ್ರ ಆರೋಗ್ಯಕ್ಕೆ ಸಹಾಯಕವಾಗುವ ಅಭ್ಯಾಸಗಳನ್ನು ಉತ್ತೇಜಿಸುವುದಕ್ಕೂ ಮೀಸಲಾಗಿದೆ.

## ಸುಭಾಷಿತ

ತಾನಾಗಿ ಬರುವುದು ಮಾತೃಭಾಷೆ.
ಪ್ರಯತ್ನಪೂರ್ವಕವಾಗಿ ಕಲಿತು
ಬರುವುದು ಅನ್ಯಭಾಷೆ.

ಎ.ಆರ್. ಕೃಷ್ಣಶಾಸ್ತ್ರಿ

# ವಾಣಿಜ್ಯ ಬಳಕೆ ಸಿಲಿಂಡರ್ ದರ 111 ರೂ.ಹೆಚ್ಚಳ:

## ಸಾಮಾನ್ಯ ಜನರಿಗೆ ನೇರ ಹೊಡೆತ; ಕೇಂದ್ರದ ವಿರುದ್ಧ ಸಿಎಂ ಸಿದ್ದರಾಮಯ್ಯ ಕಿಡಿ

❑ ನೈಜ್ಯ ದೆಸೆ ನ್ಯೂಸ್

**ಬೆಂಗಳೂರು: ವಾಣಿಜ್ಯ ಎಲ್‌ಪಿಜಿ ಸಿಲಿಂಡರ್ ಬೆಲೆಯಲ್ಲಿ ಸುಮಾರು 111 ರೂ. ಹೆಚ್ಚಳ ಮಾಡಿರುವುದು ಸಾಮಾನ್ಯ ಜನರಿಗೆ ನೇರ ಹೊಡೆತವಾಗಿದೆ ಎಂದು ಮುಖ್ಯಮಂತ್ರಿ ಸಿದ್ಧರಾಮಯ್ಯ ಅವರು ಗುರುವಾರ ಅಸಮಾಧಾನ ವ್ಯಕ್ತಪಡಿಸಿದ್ದಾರೆ.**

ಸಾಮಾಜಿಕ ಜಾಲತಾಣ ಎಕ್ಸ್ ನಲ್ಲಿ ಪೋಸ್ಟ್ ಮಾಡಿರುವ ಅವರು, ವಾಣಿಜ್ಯ ಎಲ್‌ಪಿಜಿ ಸಿಲಿಂಡರ್ ಬೆಲೆಯಲ್ಲಿ ಸುಮಾರು 111 ರೂ. ಹೆಚ್ಚಳ ಮಾಡಿರುವುದು ಸಾಮಾನ್ಯ ಜನರಿಗೆ ನೇರ ಹೊಡೆತವಾಗಿದೆ. ಚಹಾ ಅಂಗಡಿಗಳು, ದರ್ಶಿನಿಗಳು, ಸಣ್ಣ ಹೋಟೆಲ್‌ಗಳು, ಬೇಕರಿಗಳು ಮತ್ತು ಬೀದಿ ವ್ಯಾಪಾರಿಗಳು ವಾಣಿಜ್ಯ ಎಲ್‌ಪಿ-ಜಿಯನ್ನು ಅವಲಂಬಿಸಿದ್ದಾರೆ. ಅದರ ಬೆಲೆ ಏರಿದಾಗ, ಆಹಾರವು ದುಬಾರಿಯಾಗುತ್ತದೆ, ಜೀವನೋಪಾಯವು ಬಳಲುತ್ತದೆ ಮತ್ತು ಹಣದುಬ್ಬರವು ಪ್ರತಿ ಮನೆಯನ್ನು ಸದ್ದಿಲ್ಲದೆ ಪ್ರವೇಶಿಸುತ್ತದೆ ಎಂದು ಹೇಳಿದ್ದಾರೆ.



ಸೌದಿ ಒಪ್ಪಂದ ಬೆಲೆಗಳ (ಸಿಪಿ) ಏರಿಕೆಯಿಂದಾಗಿ ಎಲ್‌ಪಿಜಿ ಬೆಲೆಗಳು ಹೆಚ್ಚಾಗಿದೆ ಎಂದು ಕೇಂದ್ರ ಸರ್ಕಾರ ಈಗ ವಾದಿಸುತ್ತಿದೆ. ಅದು ತರ್ಕವಾಗಿದ್ದರೆ, ಜಾಗತಿಕ ಕಚ್ಚಾ ತೈಲ ಬೆಲೆಗಳು ನಿರಂತರವಾಗಿ ಕುಸಿಯುತ್ತಿರುವಾಗ ಪೆಟ್ರೋಲ್ ಮತ್ತು ಡೀಸೆಲ್ ಬೆಲೆಗಳನ್ನು ಏಕೆ ಕಡಿಮೆ ಮಾಡಲಾಗಿಲ್ಲ ಎಂಬ ಪ್ರಮುಖ ಪ್ರಶ್ನೆಗೆ ಪ್ರಧಾನಿ ಮೋದಿ ಅವರು ಪ್ರಾಮಾಣಿಕವಾಗಿ ಉತ್ತರಿಸಬೇಕು ಎಂದು ಆಗ್ರಹಿಸಿದ್ದಾರೆ. ಸೌದಿ ಸಿಪಿ ಏರಿಳಿತವಾಗಬಹುದು, ಆದ-'ರೆ, ಆಟೋ ಇಂಧನಗಳಿಗೆ ಪ್ರಾಥ-'ಮಿಕ ಇನ್ಪುಟ್ ಆಗಿರುವ ಕಚ್ಚಾ ತೈಲವು ಜಾಗತಿಕವಾಗಿ ಮೃದುವಾಗಿದೆ. ಆದರೂ ಪೆಟ್ರೋಲ್ ಮತ್ತು ಡೀಸೆಲ್ ಬೆಲೆಗಳು ಬದಲಾಗದೆ ಉಳಿದಿವೆ, ದಾಖಲೆಯ ಆದಾಯವನ್ನು ಗಳಿಸುವಾಗ ನಾಗರಿಕ-ರಿಗೆ ಹೊರೆಯಾಗುತ್ತವೆ. ಅಂತರರಾಷ್ಟ್ರೀಯ ಬೆಲೆ ತರ್ಕದ ಈ ಆಯ್ದ ಅನ್ವಯವು ಗಂಭೀರ ಕಳವಳಗಳನ್ನು ಹುಟ್ಟುಹಾಕುತ್ತದೆ.

ಕೇಂದ್ರ ಸರ್ಕಾರವು ನಾಗ-ರಿಕರ ಮೇಲೆ ಹೊರೆ ಹೇರುತ್ತಿದ್ದರೂ ಮತ್ತು ಹೆಚ್ಚಿನ ತೆರಿಗೆಗಳನ್ನು ಪಡೆಯುತ್ತಿದ್ದರೂ ಸಹ, ರಾಜ್ಯಗಳಿಗೆ ಸಂಪನ್ಮೂಲಗಳ ನ್ಯಾಯಯುತ ಪಾಲನ್ನು ನಿರಾಕರಿಸಲಾಗಿದೆ. ಕರ್ನಾಟಕವು ಪ್ರತಿ ವರ್ಷ ರೂ.4.5–5 ಲಕ್ಷ ಕೋಟಿ ಹಣವನ್ನು ರಾಷ್ಟ್ರೀಯ ಖಜಾನೆಗೆ ಕೊಡುಗೆ ನೀಡುತ್ತದೆ, ಆದರೆ, ಪ್ರತಿಯಾಗಿ ರೂ. 60,000 ಕೋಟಿಗಳನ್ನು ಪಡೆಯುತ್ತದೆ, ಆಗಾಗ್ಗೆ ವಿಳಂಬವಾಗುತ್ತದೆ. ಇದು ಸಹಕಾರಿ ಒಕ್ಕೂಟ ವ್ಯವಸ್ಥೆ ಅಲ್ಲ, ಇದು ಹಣಕಾಸಿನ ಅಸಮತೋಲನ ಎಂದು ಕಿಡಿಕಾರಿದ್ದಾರೆ.

ರೈಲ್ವೆ ದರಗಳನ್ನು ಹೆಚ್ಚಿಸಲಾಗಿದೆ. ಹೊಸ ಸೆಸ್‌ಗಳು ಮತ್ತು ಸರ್‌ಚಾರ್ಜ್‌ಗಳನ್ನು ಉಖಖ ಸ್ಲ್ಯಾಬ್‌ಗಳಿಗಿಂತ ಹೆಚ್ಚಾಗಿ ವಿಧಿಸಲಾಗುತ್ತದೆ. ತೆರಿಗೆಗಳು ನಿರಂತರವಾಗಿ ಏರುತ್ತವೆ, ಆದರೆ ಜವಾಬ್ದಾರಿಯನ್ನು ಸದ್ದಿಲ್ಲದೆ ಬದಲಾಯಿಸಲಾಗುತ್ತದೆ. ಇತ್ತೀಚಿನ ಉದಾಹರಣೆಯೆಂದರೆ ಒಓಖಇಉಂ, ಅಲ್ಲಿ ರಾಜ್ಯಗಳು ಈಗ ವೆಚ್ಚದ ಸುಮಾರು ಶೇ.40ರಷ್ಟನ್ನು ಭರಿಸಬೇಕಾಗುತ್ತದೆ, ಕಲ್ಯಾಣ ಹೊರೆಗಳನ್ನು ಕೆಳಕ್ಕೆ ತಳ್ಳುತ್ತವೆ.

## ಜಿಲ್ಲಾ ವರಿಷ್ಠಾಧಿಕಾರಿ ಅರುಣಾಂಶು ಗಿರಿ ಅಂಬಾಮಠಕ್ಕೆ ಭೇಟಿ ಪರಿಶೀಲನೆ.

❑ ನೈಜ್ಯ ದೆಸೆ ನ್ಯೂಸ್

**ತಾಲೂಕಿನ ಪ್ರಸಿದ್ಧ ಸಿದ್ದಪರ್ವತ ಬಗಳಾಮುಖಿ ಅಂಬಾಮಠದ ಅಂಬಾದೇವಿ ಜಾತ್ರಾ ಮಹೋತ್ಸವ ಹಾಗೂ ಜ.3 ರಂದು ಅಂಬಾಮಠದ ರಥೋತ್ಸವಕ್ಕೆ ಸಿಎಂ ಸಿದ್ದರಾಮಯ್ಯ ಸೇರಿದಂತೆ ಅನೇಕ ಸಚಿವರು, ಶಾಸಕರು, ಆಗಮಿಸಲಿರುವ ಹಿನ್ನೆಲೆಯಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅರುಣಾಂಶು ಗಿರಿ ಅವರು ಶುಕ್ರವಾರ ಸಂಜೆ ಅಂಬಾಮಠಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.**



ಶಾಸಕ ಹಂಪನಗೌಡ ಬಾದರ್ಲಿ ಅವರೊಂದಿಗೆ ಎಸ್.ಪಿ.ಅರುಣಾಂಶು ಗಿರಿ ಅವರು ಕೆಲಕಾಲ ಜಾತ್ರೆ ಮತ್ತು ಸಿಎಂ ಆಗಮನ ಹಿನ್ನೆಲೆ ಭದ್ರತೆ, ಜಾತ್ರೆಗೆ ಆಗಮಿಸುವ ಭಕ್ತರ ಹಿತ ಕಾಪಾಡುವುದು. ಯಾವುದೇ ಅಹಿತಕರ ಘಟನೆಗಳಿಗೆ ಆಸ್ಪದ ಕೊಡದೇ ಇರುವುದರ ಬಗ್ಗೆ ಚರ್ಚೆ ನಡೆಸಿದರು. ಈ ವೇಳೆ: ಕೊಪ್ಪಳ ಸಂಸದ ರಾಜಶೇಖರ ಹಿಟ್ನಾಳ್, ತಹಶೀಲ್ದಾರ್ ಅರುಣ್ ಕುಮಾರ್ ದೇಸಾಯಿ, ನಗರಸಭೆ ಪೌರಾಯುಕ್ತ ಪಾಂಡುರಂಗ ಇಟಗಿ, ಇಒ ಚಂದ್ರಶೇಖರ್, ಸೇ-ರಿದಂತೆ ಪೊಲೀಸ್ ಇಲಾಖೆಯ ಅಧಿಕಾರಿಗಳು, ಅಂಬಾಮಠದ ಸಿಬ್ಬಂದಿಗಳು, ಹಾಗೂ ಇನ್ನಿತರೆ ಅಧಿಕಾರಿಗಳು ಇದ್ದರು.

## ದಂತ ಸುರಕ್ಷಾ ಯೋಜನೆ ಯಡಿಯಲ್ಲಿ "ದಂತ ಸುರಕ್ಷಾ ಕಾರ್ಡ್ ಪಡೆದುಕೊಳ್ಳಿ" ಡಾ. ಜಗನ್ನಾಥ ಘೋಷಣೆ

❑ ನೈಜ್ಯ ದೆಸೆ ನ್ಯೂಸ್

**ಲಿಂಗಸಗೂರು: ಜ 3 . ಜನರ ಆರೋಗ್ಯ ರಕ್ಷಣೆಯೇ ವೈದ್ಯರ ಕರ್ತವ್ಯ ಎಂಬ ನಿಟ್ಟಿನಲ್ಲಿ ಬೈಪಾಸ್ ರಸ್ತೆ, ಲಿಂಗಸಗೂರ ಪಟ್ಟಣದಲ್ಲಿ ರುವ ಸೋಹನ್ ಕುಮಾರ್ ಹಲ್ಲಿನ ದವಾಖಾನೆ ಇವರ ವತಿಯಿಂದ "ಜನರು?ಜನರಿಗಾಗಿ?ಜನರಿಗೋಸ್ಕರ ದಂತ ಸುರಕ್ಷಾ ಯೋಜನೆ"ಯನ್ನು ಜಾರಿಗೆ ತರಲಾಗಿದೆ ಎಂದು ದಂತ ವೈದ್ಯರಾದ ಡಾ. ಜಗನ್ನಾಥ ರವರು ಪತ್ರಿಕಾ ಗೋಷ್ಠಿಯಲ್ಲಿ ಹೇಳಿದರು.**



ಅವರು ಕಳೆದ 10 ವರ್ಷಗಳಿಂದ ಲಿಂಗಸಗೂರು ವ್ಯಾಪ್ತಿಯಲ್ಲಿ ದಂತ ವೈದ್ಯರಾಗಿ ಸೇವೆ ಸಲ್ಲಿಸುತ್ತಿದ್ದು, 2026ರ ಹೊಸ ವರ್ಷದ ಪ್ರಯುಕ್ತ ಜನರಿಗೆ ಕೈಗೆಟುಕುವ ದರದಲ್ಲಿ ಉತ್ತಮ ದಂತಚಿಕಿತ್ಸೆ ಒದಗಿಸುವ ಉದ್ದೇಶದಿಂದ ಈ ಯೋಜನೆ ರೂಪಿಸಲಾಗಿದೆ ಎಂದರು. ಈ ಯೋಜನೆಯಡಿ ಸಾರ್ವಜನಿಕರು ಕೇವಲ 3999 ರೂ. ಪಾವತಿಸಿ ದಂತ ಸುರಕ್ಷಾ ಕಾರ್ಡ್ ಪಡೆದುಕೊಂಡಲ್ಲಿ, ಸಾಮಾನ್ಯವಾಗಿ ಸಾವಿರಾರು ರೂಪಾಯಿ ವೆಚ್ಚವಾಗುವ ಹಲವು ದಂತಚಿಕಿತ್ಸೆಗಳನ್ನು ಉಚಿತವಾಗಿ ಪಡೆಯಬಹುದಾಗಿದೆ.

"ಇನ್ನು ಹಲ್ಲುನೋವು ಇದ್ದರೂ ಹಣದ ಕೊರತೆಯಿಂದ ಚಿಕಿತ್ಸೆ ಮುಂದೂಡುವ ಪರಿಸ್ಥಿತಿ ಇರಬಾರದು. ಸರ್ಕಾರಿ ಆಸ್ಪತ್ರೆಗಳಲ್ಲಿಯೂ ಲಭ್ಯವಿಲ್ಲದ ಕೆಲ ಚಿಕಿತ್ಸೆಗಳು ಈ ಯೋಜನೆಯಲ್ಲಿ ಸೇರಿವೆ" "ಈ ಯೋಜನೆ ಜನರ ಆರೋಗ್ಯದ ಭದ್ರತೆಗೆ ದೊಡ್ಡ ಸಹಾಯವಾಗಲಿದೆ. ಎಲ್ಲರೂ ಈ ಅವಕಾಶವನ್ನು ಸದುಪಯೋಗ 'ಪಡಿಸಿಕೊಳ್ಳಬೇಕು" ಎಂದು ಡಾ. ಜಗನ್ನಾಥ ಪತ್ರಿಕಾ ಗೋಷ್ಠಿಯಲ್ಲಿ ಸಾರ್ವಜನಿಕರಲ್ಲಿ ಮನವಿ ಮಾಡಿಕೊಂಡರು ಈ ಸಂದರ್ಭದಲ್ಲಿ ರಿಯಾಜ್ ಉಪಸ್ಥಿತರಿದ್ದರು.

## ಗೃಹಲಕ್ಷ್ಮಿ ಹಣದಲ್ಲಿ ಫ್ರಿಡ್ಜ್ ಖರೀದಿಸಿದ ಉಪ್ಪಲದೊಡ್ಡಿ ಗ್ರಾಮದ ಮಹಿಳೆ

❑ ನೈಜ್ಯ ದೆಸೆ ನ್ಯೂಸ್

**ರಾಜ್ಯದ ಕಾಂಗ್ರೆಸ್ ಸರ್ಕಾರ ಮಹಿಳೆಯರ ಆರ್ಥಿಕ ಸ್ವಾತಂತ್ರ್ಯಕ್ಕಾಗಿ ಜಾರಿಗೆ ತಂದ ಗೃಹಲಕ್ಷ್ಮಿ ಯೋಜನೆ ಗ್ರಾಮೀಣ ಭಾಗದ ಮನೆಗಳಲ್ಲಿ ಹೊಸ ಆಶಾಕಿರಣ ಮೂಡಿಸಿದೆ.**

ಕಾರಣ ತಾಲೂಕಿನ ಉಪ್ಪಲದೊಡ್ಡಿ ಗ್ರಾಮದ ನಿವಾಸಿ ಹನುಮಮ್ಮ ಗಂಡ ದುರುಗಪ್ಪ ನಡುಲುಮನಿ ಅವರು, ತಮಗೆ ಪ್ರತಿ ತಿಂಗಳು ಬರುತ್ತಿದ್ದ 2 ಸಾವಿರ ಗೃಹಲಕ್ಷ್ಮಿ ಹಣ ಉಳಿತಾಯ ಮಾಡಿ ಇಂದು ತಮ್ಮ ಮನೆಗೆ ಒಂದು ಹೊಸ ಫ್ರಿಡ್ಜ್ ಖರೀದಿಸುವ ಮೂಲಕ ಆರ್ಥಿಕ ಸಬಲೀಕರಣದ ಹಾದಿಯಲ್ಲಿ ಹೊಸ ಮೈಲಿಗಲ್ಲು ಸ್ಥಾಪಿಸಿದ್ದಾರೆ. ಸಂಸದ ರಾಜಶೇಖರ್ ಹಿಟ್ನಾಳ್ ಹಾಗೂ ವಿಧಾನ ಪರಿಷತ್ ಶಾಸಕ ಬಸನಗೌಡ



ಬಾದರ್ಲಿ, ಮಸ್ಕಿ ಶಾಸಕ ಬಸನಗೌಡ ತುರ್ವಿಹಾಳ ಹಾಗೂ ಯುವ ನಾಯಕ ಆರ್.ಸಿದ್ದನಗೌಡ ತುರ್ವಿಹಾಳರವರ ಸಮರ್ಥ ನಾಯಕತ್ವದಲ್ಲಿ ಕಾಂಗ್ರೆಸ್ ಪಕ್ಷದ ಭರವಸೆಗಳು ಹೇಗೆ ಸಾಮಾನ್ಯ ಜನರ ಬದುಕಿನಲ್ಲಿ ಹೆಮ್ಮೆಯ ಬೆಳಕು ತರುತ್ತಿವೆ ಎಂಬುದಕ್ಕೆ ಇದೊಂದು ನಿದರ್ಶನವಾಗಿದೆ.

ಇಂತಹ ಅದ್ಭುತ ಯೋಜನೆಯನ್ನು ಜಾರಿಗೆ ತರಲು ಕಾರಣೀಕರ್ತರಾಗಿ ಶ್ರಮಿಸಿದ ಕಾಂಗ್ರೆಸ್ ಪಕ್ಷದ ಮುಂಚೂಣಿ ಘಟಕದ ಎಲ್ಲಾ ನಾಯಕರಿಗೆ ಈ ಮೂಲಕ ಹೃತ್ಪೂರ್ವಕ ಅಭಿನಂದನೆಗಳನ್ನು ಸಲ್ಲಿಸಲಾಗುತ್ತಿದೆ. ಸರ್ಕಾರದ ಹಣವನ್ನು ಅತ್ಯಂತ ಜಾಣ್ಮೆಯಿಂದ ಸದುಪಯೋಗಪಡಿಸಿಕೊಂಡು, ತಮ್ಮ ಮನೆಯ ದಶಕಗಳ ಕನಸನ್ನು ನನಸು ಮಾಡಿಕೊಂಡ ಹನುಮಮ್ಮನವರ ಸಾಧನೆ ಸ್ತ್ರೀಶಕ್ತಿಯ ಗೌರವವನ್ನು ಎತ್ತಿ ಹಿಡಿದಿದ್ದು, ಇದು ಇಡೀ ನಾಗರಿಕ ಸಮಾಜವೇ ಹೆಮ್ಮೆ ಪಡುವಂತಹ ಮತ್ತು ಕೃತಜ್ಞತೆ ಸಲ್ಲಿಸಬೇಕಾದ ಕ್ಷಣವಾಗಿದೆ.

## ಸರಸ್ವತಿ ಬೌದ್ಧಿಕ ಸ್ವರೂಪದ ಸಂಕೇತ: ಮುರಿಗೆಪ್ಪ ಸರಶಟ್ಟಿ

❑ ನೈಜ್ಯ ದೆಸೆ ನ್ಯೂಸ್

**ತಾಳಿಕೋಟಿ: ನಮಗೆ ಬೇಕಾದ ಎಲ್ಲ ವಿಧದ ವಿದ್ಯೆಗಳನ್ನೂ ದಯಪಾಲಿಸುವವಳು ಸರಸ್ವತಿಯಾಗಿದ್ದು ಬರಿ ವಿದ್ಯೆಯನ್ನಷ್ಟೆ ಗಳಿಸಿದರೆ ಪ್ರಯೋಜನವಿಲ್ಲ ಅದನ್ನು ಸರಿಯಾಗಿ ಬಳಸಲು ಬುದ್ಧಿಯೂ ಬೇಕು.**

ಇಂಥ ಬುದ್ಧಿಯನ್ನು ಕೊಡುವವಳೂ ಸರಸ್ವತಿಯೇ ಎಂದು ತಾಳಿಕೋಟಿ ವಿ. ವಿ ಸಂಘದ ಕಾರ್ಯದರ್ಶಿ ಎಂ ಎಸ್ ಸರಶೆಟ್ಟಿ ಹೇಳಿದರು. ಸ್ಥಳೀಯ ಶ್ರೀ ಖಾಸ್ಗತೇಶ್ವರ ಶಿಕ್ಷಣ ಮಹಾವಿದ್ಯಾಲಯದಲ್ಲಿ ಶುಕ್ರವಾರ ಪ್ರಥಮ ವರ್ಷದ ಪ್ರಶಿಕ್ಷಣಾರ್ಥಿಗಳ ಪ್ರಾರಂಭೋತ್ಸವ ದಿನದಂದು ಸರಸ್ವತಿ ಪೂಜೆ ನೆರವೇರಿಸಿ ಮಾತನಾಡಿದರು. ಸರಸ್ವತಿಯು ನಮಗೆ ಬೌದ್ಧಿಕ ಸ್ವರೂಪದ ಶಕ್ತಿಯ ಸಂಕೇತ ಆದುದರಿಂದಲೇ ಯಾವುದೇ



ವಿದ್ಯೆಯ ಆರಂಭದಲ್ಲಿ ಸರಸ್ವತಿಯನ್ನು ಪ್ರಾರ್ಥಿಸಿಕೊಳ್ಳುವುದು ಎಂದು ಹೇಳಿದರು. ಕಾರ್ಯಕ್ರಮವನ್ನು ಉದ್ದೇಶಿಸಿ ಇನ್ನೋರ್ವ ಮುಖ್ಯ ಅತಿಥಿ ಸಂಘದ ಉಪಾಧ್ಯಕ್ಷ ಕಾಶಿನಾಥ ಮುರಾಳ ಮಾತನಾಡಿದರು.

ಅಧ್ಯಕ್ಷತೆ ವಹಿಸಿ ಪ್ರಾಚಾರ್ಯ ಆರ್. ಎಂ. ಬಂಟನೂರ ಮಾತನಾಡಿದರು. ಕಾರ್ಯಕ್ರಮದಲ್ಲಿ ಪ್ರಥಮ ವರ್ಷ ಹಾಗೂ ದ್ವಿತೀಯ ವರ್ಷದ ಪ್ರಶಿಕ್ಷಣಾರ್ಥಿಗಳು ಉಪನ್ಯಾಸಕರು ಸಿಬ್ಬಂದಿ ವರ್ಗ ಉಪಸ್ಥಿತ-ರಿದ್ದರು. ರೂಪ ಕಾಖಂಡಕಿ ನಿರೂಪಿಸಿದರು. ಸೀಮಾ ಹಾಗೂ ಅನ್ನಪೂರ್ಣ ಪ್ರಾರ್ಥಿಸಿದರು. ಕೀರ್ತಿ ಹಂದ್ರಾಳ ಸ್ವಾಗತಿಸಿ ಪರಿಚಯಿಸಿದಳು. ರೇಷ್ಮಾ ಚಲವಾದಿ ವಂದಿಸಿದಳು.

# ಚನ್ನಬಸವ ತಾತನ ಜೋಡು ರಥೋತ್ಸವ–ಗಂಗಾವತಿ

❑ ನೈಜ್ಯ ದೆಸೆ ನ್ಯೂಸ್

**ಗಂಗಾವತಿ: ಜ 2 ಭತ್ತದ ನಾಡಿನ ಕಾಯಕಯೋಗಿ, ತ್ರಿವಿಧ ದಾಸೋಹಿ ಚನ್ನಬಸವ ತಾತನವರ 80ನೇ ಪುಣ್ಯಸ್ಮರಣೋತ್ಸವ ಅಂಗವಾಗಿ ಗುರುವಾರ ಸಂಜೆ ನಗರದ ಪ್ರಮುಖ ರಸ್ತೆಗಳಲ್ಲಿ ಸಾವಿರಾರು ಭಕ್ತರ ಸಮ್ಮುಖದಲ್ಲಿ ಚನ್ನಬಸವ ತಾತ ನವರ ಜೋಡು ರಥ-ೋತ್ಸವ ಸಡಗರ, ಸಂಭ್ರಮದಿಂದ ನೆರವೇರಿತು.**

ತಾತನ ಮಠದಿಂದ ಸಕಲವಾದ್ಯಗಳೊಂದಿಗೆ ಆರಂಭಗೊಂಡ ಜೋಡು ರಥೋತ್ಸವ ರಾಜ ಬೀದಿಯಾದ ಗಣೇಶ ವೃತ್ತ ದಿಂದ, ಗಾಂಧಿವೃತ್ತದ ಮೂಲಕ ಸಾಗಿ, ಬಸವಣ್ಣ ವೃತ್ತ ದಲ್ಲಿರುವ ಪಾದಕಟ್ಟೆ ತಲುಪಿ ಮತ್ತೆ ವಾಪಸ್ ಶ್ರೀಮಠಕ್ಕೆ ಬಂದು ತಲುಪಿತು. ರಸ್ತೆಯ ಇಕ್ಕೆಲಗಳಲ್ಲಿ, ಬೃಹತ್ ಕಟ್ಟಡಗಳ ಮೇಲೆ ಸಾವಿರಾರು ಸಂಖ್ಯೆಯ ಭಕ್ತರು ನಿಂತು ರಥ-ೋತ್ಸವವನ್ನು ಕಣ್ತುಂಬಿಕೊಂಡರು. ಸಂಜೆ ಜೋಡು ರಥೋತ್ಸವ ಸಾಗುತ್ತಿದ್ದಾಗ ಮಹಿಳೆಯರು, ಯುವಕರು, ಯುವತಿಯರು, ಮಕ್ಕಳು,ಹಿರಿಯರು ಬಾಳೆಹಣ್ಣು, ಉತ್ತತ್ತಿ, ಹೂವು ಎರಚಿ ಗೌರವ ಸಲ್ಲಿಸಿದರು. ತಾತನ ಜಾತ್ರೆಯ ರಥೋತ್ಸವ ಕಣ್ತುಂಬಿಕೊಳ್ಳಲು ಕುಟುಂಬದ ಸದಸ್ಯರ ಸಮೇತ ಕಾರಟಗಿ, ಕನಕಗಿರಿ,



ಶ್ರೀರಾಮ ನಗರ, ಹುಲಗಿ ಸೇರಿ ಗಂಗಾವತಿ ತಾಲ್ಲೂಕು ಸುತ್ತಮುತ್ತಲಿನ ಎಲ್ಲ ಗ್ರಾಮಗಳಿಂದ ಭಕ್ತರು ತಂಡೋಪತಂಡವಾಗಿ ಹರಿದು ಬಂದಿದ್ದರು.

ಬೆಳಿಗ್ಗೆ 5 ಗಂಟೆಯಿಂದಲೇ ಹಣವಾಳ, ದಾಸನಾಳ, ಕೆಸರ ಹಟ್ಟಿ, ವಡ್ಡರಹಟ್ಟಿ, ಹೇರೂರು, ಢಣಾಪುರ, ಶರಣಬಸವೇಶ್ವರ ಕ್ಯಾಂಪ್, ಬಸಾಪಟ್ಟಣ, ಆರ್ಹಾಳ, ಸಿಂಗನಾಳ ಸೇ ರಿ ವಿವಿಧ ಗ್ರಾಮಗಳಿಂದ ಭಕ್ತರು ಕಾಲ್ನಡಿಗೆಯ ಮೂಲಕ ಶ್ರೀಮಠಕ್ಕೆ ಆಗಮಿಸಿ, ಚನ್ನಬಸವ ತಾತನ ಜೊತೆಗೆ ಗದ್ದುಗೆ ದರ್ಶನ ಪಡೆದರು. ಬೆಳಿಗ್ಗೆ ಚನ್ನಬಸವ ತಾತನ ಮೂರ್ತಿಗೆ ಪಂಚಾಮೃತ ಅಭಿಷೇಕ, ಮಹಾರುದ್ರಾಭಿಷೇಕ, ಬಿಲ್ವಾರ್ಚನೆ, ಕುಂಕುಮಾರ್ಚನೆ, ಅಭಿಷೇಕ, ಅಷ್ಟೋತ್ತರ ಪಾರಾಯಣ, ವಿಶೇಷ ಹೂವಿನ ಅಲಂಕಾರ ಸೇರಿದಂತೆ ವಿವಿಧ ರೀತಿಯ ವಿಶೇಷ ಪೂಜಾ ಕಾರ್ಯಕ್ರಮಗಳು ಜರುಗಿದವು.

ನಂತರ ಪಟ ಏರಿಸಿ, ಮಡಿರಥ ಎಳೆಯಲಾಯಿತು. ಇನ್ನೂ ಜಾತ್ರೆ ಮತ್ತು ರಥೋತ್ಸವ ನಿಮಿತ್ತ ಚನ್ನಬಸವ ತಾತನ ದೇವಸ್ಥಾನವನ್ನು ಬಾಳೆದಿಂಡು, ಹೂವಿನ ತೋರಣ, ತೆಂಗಿನಗರಿ,ಪೆಂಡಲ್ ಹಾಕಿ ವಿದ್ಯುತ್ ಅಲಂಕಾರದಿಂದ ಸಿಂಗರಿಸಿದರೇ, ತಾತನ ಗದ್ದುಗೆ ಮತ್ತು ಮೂರ್ತಿಯನ್ನು ವಿಶೇಷವಾಗಿ ಹೂವುಗಳಿಂದ ಅಲಂಕಾರ ಮಾಡಿದ ದೃಶ್ಯಗಳು ಕಂಡು ಬಂದವು. ಮಹಿಳೆಯರು ಕುಟುಂಬಸ್ಥರ ಸಮೇತ ನೂತನ ವಸ್ತ್ರಗಳನ್ನು ಧರಿಸಿ ದೇವಸ್ಥಾನಕ್ಕೆ ಆಗಮಿಸಿ ಸರತಿಯಲ್ಲಿ ನಿಂತು, ತಾತನ ಆಶೀರ್ವಾದ ಪಡೆದು, ಹೂವು, ಕರ್ಪೂರ ಸೇರಿ ತೆಂಗಿನಕಾಯಿ ಸಮರ್ಪಿಸಿದರು. ನಂತರ ಮಕ್ಕಳೊಂದಿಗೆ ಜಾತ್ರೆಯಲ್ಲಿನ ಕಿವಿಯೋಲೆ, ಬಳೆ, ಕುಂಕುಮ, ಮಕ್ಕಳ ಆಟದ ಸಾಮಾನು ಸೇರಿ ವಿವಿಧ ಜ್ಯೋಗ್ಯಾರ ವಸ್ತುಗಳು ಖರೀದಿಸಿದರು.

ದಾಸೋಹ ವ್ಯವಸ್ಥೆ: ಚನ್ನಬಸವ ತಾತನ ಜಾತ್ರೆಗೆ ಆಗಮಿಸಿದ ಭಕ್ತರಿಗೆ ಚನ್ನಬಸವ ಕಲ್ಯಾಣ ಮಂಟಪದಲ್ಲಿ (ಮಹಿಳೆಯರಿಗೆ) ಹಾಗೂ ಆವರಣದಲ್ಲಿ (ಪುರುಷರಿಗೆ) ಸಿಹಿ (ಬೂಂದಿ), ರೊಟ್ಟಿ, ಬದನೆಕಾಯಿ ಪಲ್ಯ, ಅನ್ನ, ಸಾಂಬಾರಿನ ಊಟದ ಪ್ರಸಾದ ವ್ಯವಸ್ಥೆ ಕಲ್ಪಿಸಲಾಗಿತ್ತು. ವರಸಿದ್ಧಿ ಆಸ್ಪತ್ರೆಯವರು ಉಚಿತ ಮಜ್ಜಿಗೆ ಸೇವೆ ನೀಡಿದರು. ಮಾಜಿ ಶಾಸಕ ಪರಣ್ಣ ಮುನವಳ್ಳಿ ಸೇರಿ ದೇವಸ್ಥಾನ ಸಮಿತಿ ಸದಸ್ಯರು ದಾಸೋಹ ಮಾಡಿದರು.

ಬಿಗಿ ಪೊಲೀಸ್ ಬಂದೋಬಸ್ತ್: ಚನ್ನಬಸವ ತಾತನ ಜಾತ್ರೆಯ ನಿಮಿತ್ತ ನಗರದಲ್ಲಿ ಸಂಚಾರದಟ್ಟ ಉಂಟಾಗದಂತೆ ಪೊಲೀಸ್ ಇಲಾಖೆ ಪೊಲೀಸ್ ಸಿಬ್ಬಂದಿಯನ್ನ ನಿಯೋಜಿಸಿ, ಅಗತ್ಯ ಬಂದೋಬಸ್ ಕಲ್ಪಿಸಲಾಗಿ-ತ್ತು. ಬೆಳಿಗ್ಗೆ ಯಿಂದಲೇ ಪೊಲೀಸರು ಗಣೇಶ,ಗಾಂಧಿ, ನೀಲಕಂಠೇಶ್ವರ, ಜುಲಾಯಿನಗರ, ಕೃಷ್ಣದೇವರಾಯ ವೃತ್ತದ ಬಳಿ ಬ್ಯಾರಿಕೆಡ್ ಅಳವಡಿಸಿ, ಮಠದ ಮಾರ್ಗದಲ್ಲಿ ಸಂಚಾರಕ್ಕೆ ಅವಕಾಶ ನೀಡದೆ, ಪರ್ಯಾಯ ಮಾರ್ಗದಲ್ಲಿ ಸಂಚರಿಸಲು ಅವಕಾಶ ನೀಡಲಾಗಿತ್ತು. ನಗರಸಭೆ ಸದಸ್ಯರಾದ ವಾಸುದೇವ ನವಲಿ, ಜಿ.ಪಂ ಮಾಜಿ ಸದಸ್ಯ ಅಮರೇಶ ಗೋನಾಳ ಸೇರಿದಂತೆ ದೇವಸ್ಥಾನ ಸಮಿತಿ ಸದಸ್ಯರು, ಸ್ಥಳೀಯ ಜನಪ್ರತಿನಿಧಿಗಳು, ವಿವಿಧ ಗ್ರಾಮಗಳಿಂದ ಆಗಮಿಸಿದ ಭಕ್ತರು ಉಪಸ್ಥಿತರಿದ್ದರು.

## ಸಾಹಿತ್ಯ ಸಿಂಚನ

ಸಾವಿತ್ರಿ ಬಾಯಿ ಪುಲೆ

ದೇಶದ ಮೊದಲ ಮಹಿಳಾ ಶಿಕ್ಷಕಿ ಸಾವಿತ್ರಿ ಬಾಯಿ ಪುಲೆ
ಹೆಣ್ಣು ಮಕ್ಕಳಿಗಾಗಿ ಮೊದಲ ಶಾಲೆ ತೆರೆದ ವಿದ್ಯೆ ಮಾತೆ
ಪುಲೆ
8ನೇ ವಯಸ್ಸಿಗೆ ಜ್ಯೋತಿ ಬಾ ಪುಲೆಗೆ ಸತಿಯಾಗಿ ನಿಂದು
ಬಾಲ್ಯ ವಿವಾಹ ಕೇಶಮುಂಡನಗಳ ವಿರುದ್ಧ ಗುಡುಗಿದರು

ಶಿಶು ಕೇಂದ್ರ ತೆರೆದು ಅನಾಥ ಮಕ್ಕಳಿಗೆ ಅಮ್ಮನಾದವರು
ತಳ ಸಮುದಾಯದ ಹೆಣ್ಣು ಮಕ್ಕಳಿಗೆ ಮೊದಲ ಶಾಲೆ
ತೆರೆದು
ಕೂಲಿಕಾರ್ಮಿಕರ ಅನಕೂಲಕ್ಕೆಂದೆ ರಾತ್ರಿ ಶಾಲೆ ಮಾಡಿ
ಅಕ್ರಮ ಗರ್ಭಿಣಿ, ವಿದಿವೆಯರಿಗೆ ಪುನರ್ವಸತಿ ಕಲ್ಪಿಸಿದರು

ಜ್ಯೋತಿ ಬಾ ಅವರ ಭಾಷಣಗಳು ಕರ್ಜೆ ಅವರ ಕೃತಿಯು
ಭವನ ಕಾಶಿ ರತ್ನಾಕರ, ಕಾವ್ಯ ಪುಲೆಗಳನೂ ಬರೆದು
ಮಾನವೀಯತೆ ಮಹಾಧರ್ಮವೆಂದು ಬಾಳಿ ಬದುಕಿದವರು
ಕಷ್ಟದೊಳಗಿನ ವಜ್ರವು ಇವರು ನೊಂದವರ ಧನಿಯು

ಯಶವಂತನೆಂಬ ದತ್ತು ಪುತ್ರನನ್ನು ಸಾಕಿ ಸಲುಹಿದವರು
ತಾಯಿಯ ತಾಳ್ಮೆಗೆ ತೂಕವಿಲ್ಲವೆಂದು ಜಗಕೆ ಸಾರಿದವರು
ಸಹನೆಯನ್ನೆ ದೊಡ್ಡ ಆಸ್ತಿಯೆಂದು ಸಹಿಕೊಂಡ ಗುರುವು
ಸಮಾಜ ಸೇವೆ ಮಾಡಿ ಜಗದಿ ಶಾಶ್ವತ ನೆಲೆಯ
ನಿಂತವರು

ಪತಿಯ ಬೆಂಬಲದಿ ಲೋಕದ ಮಾತಿಗೆ ಕಿವಿಯ
ಕೊಡದವರು
ಮಹಾರಾಷ್ಟ್ರದ ಪ್ರತಿಭೆ ಜಲಾಶಯ ನಿರ್ಭಿತೆ ಪುಲೆ ಇವರು
ಕ್ಷಾಮದ ಕಾಲಕ್ಕೆ ಸ್ವತಃ ಜನರ ಸೇವೆಗೆ ನಿಂತವರು
ಪ್ಲೇಗು ಬಂದವರ ಹಾರೈಕೆಯಲಿ ಪ್ರಾಣವ ಬಿಟ್ಟವರು

ಹದಿನೆಂಟು ನೂರ ತೊಂಬತ್ತೇಳು ಮಾರ್ಚ್ ಹತ್ತು ಅಂದು
ಸಾವಿತ್ರಿ ಬಾ ಪುಲೆ ಜಗದಿ ಕಣ್ಮರೆ ಆದಂತ ದಿನವಂದು
ಗಟ್ಟಿಗಿತ್ತಿಯಾಗಿ ಸಾಧಿಸಿ ತೋರಿದ ಮಹಾ ಸಾಧ್ವಿ ಗುರುವು
ಸರ್ವರ ಏಳ್ಗೆಯ ಕ್ರಾಂತಿಯಾ ಕಿಡಿ ಮಹಾ ಜ್ಞಾನ ಜ್ಯೋತಿ

ತುಳಸಿದಾಸ ಬಿ ಸಹ ಶಿಕ್ಷಕರು ಸಿಂಧನೂರು

# ಬಡ ಮಕ್ಕಳಿಗೆ ಹೊಸ ಬಟ್ಟೆ ನೀಡಿ ಹೊಸ ವರ್ಷ ಆಚರಿಸಿದ ಡಾ. ಶಿವರಾಜ ಪಾಟೀಲ್ ಕರುಣೆಯ ಅರ್ಥ ಮರುಪರಿಭಾಷಿಸಿದ ವೈದ್ಯರ ಹೆಜ್ಜೆ

ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ಜನವರಿ 01 ಹೊಸ ವರ್ಷದ ಸಂಭ್ರಮವನ್ನು ಸಾಮಾನ್ಯವಾಗಿ ಕುಟುಂಬ, ಸ್ನೇಹಿತರು,ಪ್ರೀತಿ?ಪ್ರೀತಿಯವರೊಂದಿಗೆ ಆಚರಿಸುವುದು ನಮ್ಮಲ್ಲಿ ರೂಢಿ. ಆದರೆ ಸಿಂಧನೂರಿನ ಸಹನಾ ಆಸ್ಪತ್ರೆಯ ಪ್ರಸಿದ್ಧ ಮಕ್ಕಳ ತಜ್ಞ ಡಾ. ಶಿವರಾಜ ಪಾಟೀಲ್ ಅವರು ಈ ಹೊಸ ವರ್ಷವನ್ನು ವಿಶಿಷ್ಟ ರೀತಿಯಲ್ಲಿ, ಸಮಾಜದ ಅಂಚಿನಲ್ಲಿರುವ ಮಕ್ಕಳೊಡನೆ ಆಚರಿಸಿ ಮಾನವೀಯತೆಯತ್ತ ಹೊಸ ದೃಷ್ಟಿಯನ್ನು ನೀಡಿದರು.**

ಗುರುವಾರ, ನಗರದ ಕಸ ಆಯುವ ಸಮುದಾಯದ 100ಕ್ಕೂ ಹೆಚ್ಚು ಮಕ್ಕಳಿಗೆ ಹೊಸಬಟ್ಟೆಗಳನ್ನು ಹಂಚುವ ಮೂಲಕ, ಈ ಹೊಸ ವರ್ಷವನ್ನು "ಸಂತೋಷ ಹಂಚುವ ಹಬ್ಬ" ಆಗಿ ಪರಿವರ್ತಿಸಿದರು. "ಬದುಕು ಅವರಿಗೊಂದು ಹೋರಾಟ; ಹೊಸ ವರ್ಷವೆಂದರೆ ಅವರಿಗೆ ಹೊಸ ಬಟ್ಟೆಯೇ ಇಲ್ಲ" "ಕಸ ಆಯುವ ಮಕ್ಕಳಿಗೆ ಹೊಸ ವರ್ಷ ವೈಭವವಲ್ಲ; ಅದು ಉಳಿದ ದಿನಗಳಂತೆಯೇ.

ಮೈ ನಡುಗಿಸುವ ಚಳಿಯಲ್ಲಿ ಸೂರ್ಯೋದಯಕ್ಕೂ ಮುನ್ನ ಎದ್ದು ಕಸದ ರಾಶಿಯಲ್ಲಿ ಪ್ಲಾಸ್ಟಿಕ್ ಆಯುವ ದುಸ್ಥಿತಿ ಅವರ ದೈನಂದಿನ ಬದುಕು. ಅವರು ಬಯಸುವುದೇ ಅಚ್ಚರಿ ತುಂಬಿದ ಉಡುಗೊರೆಯಲ್ಲ; ಬದಲು ಸ್ವಲ್ಪ ದಯೆ, ಸ್ವಲ್ಪ ಪ್ರೀತಿ."






"ಹೊಸ ವರ್ಷ ಎಂಬುದು ನಾವು ಅನುಭವಿಸುವ ಸಂಭ್ರಮವಾಗದೇ, ಇತರರಿಗೆ ಹಂಚಬಹುದಾದ ಮಮತೆಯಾಗಿರಲಿ." ದಾನ ಕಾರ್ಯಕ್ರಮದಲ್ಲಿ ಮಕ್ಕಳ ಉಲ್ಲಾಸ ಹೊಸಬಟ್ಟೆಗಳನ್ನು ಸ್ವೀಕರಿಸಿದ ಬಾಲಕರು:ಕೈಯಲ್ಲಿ ಬಟ್ಟೆ ಹಿಡಿದು ನಗುತ, ಕೆಲವರು "ಅಣ್ಣಾ, ಧನ್ಯವಾದ" ಎಂದು ಹೇಳುತ್ತಾ, ಇನ್ನೂ ಕೆಲವರು ಸಂತೋಷದಿಂದ ಪರಸ್ಪರ ಅಪ್ಪಿಕೊಂಡದ್ದು ಜನರನ್ನು ತಟ್ಟಿದ ದೃಶ್ಯ. ಮಕ್ಕಳಿಗೆ ಬಟ್ಟೆ ಹಂಚಿದ ನಂತರ, ಸಿಬ್ಬಂದಿ ಸದಸ್ಯರು ಅವರಿಗೆ ಸಣ್ಣ ಉಪಹಾರವನ್ನೂ ನೀಡಿದರು.

ಅಲ್ಲಿ ಉತ್ಸಾಹ, ಪ್ರೀತಿ, ಕಾಳಜಿ ಮತ್ತು ಮಮತೆಯ ವಾತಾವರಣ ತುಂಬಿಕೊಂಡಿತ್ತು. ಅಬ್ಬರದ ಸಂಭ್ರಮಕ್ಕಿಂತ ಮಾನವೀಯ ಸೇವೆಯಲ್ಲಿ ಸಂತೋಷವಿದೆ ಎಂಬ ಸಂದೇಶವನ್ನು ಅವರು ಒಟ್ಟಾಗಿ ಸಾರಿದರು. ವೈದ್ಯನೆಂದರೆ ಕೇವಲ ಚಿಕಿತ್ಸೆ ನೀಡುವವನೆಂದು ಮಾತ್ರವಲ್ಲ, ಸಮಾಜದ ನೋವಿಗೆ ಸ್ಪಂದಿಸುವವನು ಎಂದು ಸಾಬೀತಾಗಿದೆ" ಎಂದು ಹಲವರು ಅಭಿಪ್ರಾಯಪಟ್ಟರು. "ಇಂತಹ ಸೇವಾ ಮನೋಭಾವದಿಂದ ಸಮಾಜ ಬದಲಾಗುತ್ತದೆ. ಇತರರು ಸಹ ಪ್ರೇರಿತರಾಗಬೇಕು" ಎಂದು ಪ್ರಶಂಸಿಸಲಾಯಿತು. "ಸಮಾಜಕ್ಕೆ ವೈದ್ಯರು ಕೇವಲ ರೋಗಕ್ಕೆ ಮಾತ್ರವಲ್ಲ, ನೋವಿಗೆ ಸಹ ಚಿಕಿತ್ಸೆ ಕೊಡುತ್ತಾರೆ.

ಒಬ್ಬ ಸಿಬ್ಬಂದಿ ಸದಸ್ಯರು ಹೇಳಿದರು "ಈ ಮಕ್ಕಳು ನಮ್ಮ ನಗರದ ಕಷ್ಟಪಡುವ ಭಾಗ. ಅವರಿಗೆ ಹೊಸಬಟ್ಟೆ ಕೊಟ್ಟಾಗ ಅವರ ಕಣ್ಣಲ್ಲಿ ಕಾಣುವ ಪ್ರತಿಯೊಂದು ಸಂತೋಷದ ಹೊಳಪು ನಮ್ಮನ್ನು ಭಾವುಕರನ್ನಾಗಿಸುತ್ತದೆ." ಸಮಾಜದ ವಿವಿಧ ವರ್ಗಗಳಿಂದ ಮೆಚ್ಚುಗೆ ನಗರದ ಸಾಮಾಜಿಕ ಸಂಘಟನೆಗಳು, ಶಿಕ್ಷಕರು, ಸ್ವಯಂಸೇವಕರು, ರಾಜಕೀಯ ಮುಖಂಡರು?– ಎಲ್ಲರೂ ವೈದ್ಯರ ಈ ಕಾರ್ಯಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಅವರಿಂದ ಪ್ರೇರಿತವಾಗಿ ಇದೇ ರೀತಿಯ ಸೇವಾ ಚಟುವಟಿಕೆಗಳು ಹೆಚ್ಚಾಗಲಿ ಎಂಬ ಆಶೆಯನ್ನೂ ವ್ಯಕ್ತಪಡಿಸಿದ್ದಾರೆ.

ಇದು ಕೇವಲ ಬಟ್ಟೆ ಹಂಚಿಕೆ ಅಲ್ಲ ಇದು ಮನುಷ್ಯತ್ವದ ಮೌಲ್ಯಪಾಠ ಡಾ. ಶಿವರಾಜ ಪಾಟೀಲ್ ಅವರ ಕಾರ್ಯವು ನಮಗೆ ನೀಡುವ ಸಂದೇಶ:"ಸಂತೋಷವನ್ನು ಉಳಿಸಿಕೊಂಡು ಬದುಕುವುದಕ್ಕಿಂತ, ಅದನ್ನು ಹಂಚಿಕೊಂಡಾಗಲೇ ಅದು ಅರ್ಥಪೂರ್ಣ."ಹೀಗೆ ಸಮಾಜಕ್ಕೆ ಪ್ರೇರಣೆಯಾದ ಈ ಕರುಣೆಯ ಕೆಲಸವು ಸಿಂಧನೂರು ನಾಗರಿಕರಿಗೆ ಹೊಸ ವರ್ಷದ ಹೊಸ ಸಂದೇಶ ನೀಡಿದೆ. ಈ ಕಾರ್ಯಕ್ರಮದಲ್ಲಿ ಸಹನಾ ಆಸ್ಪತ್ರೆಯ ನರ್ಸ್‌ಗಳು, ಸಿಬ್ಬಂದಿ, ಹಾಗೂ ವೈದ್ಯರ ಸ್ನೇಹಿತರು ಭಾಗವಹಿಸಿದ್ದರು.

# ಜಾತ್ರಾ ಸಮಯದಲ್ಲಿ ಸಾರ್ವಜನಿಕರ ಆರೋಗ್ಯ ದೃಷ್ಟಿಯಿಂದ ಹೆಚ್ಚಿನ ಜಾಗೃತಿ ನೀಡಿ:ಡಾ ಸುರೇಂದ್ರ ಬಾಬು



ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ಜ.02: ಸಾರ್ವಜನಿಕರು ಜಾತ್ರೆಯ ಸಮಯದಲ್ಲಿ ಕುಡಿಯಲು ಶುದ್ಧ ನೀರು ಬಳಸುವ, ಸೇವಿಸುವ ಆಹಾರ ಸಂಪೂರ್ಣವಾಗಿ ಬೇಯಿಸಿ ಸೇವಿಸುವ ಹಾಗೂ ಆಹಾರವನ್ನು ತರೆದಿಟ್ಟು ಮಾರಾಟ ಮಾಡದಂತೆ ಸಹಕರಿಸುವ ಮೂಲಕ ಸಂಭಾವ್ಯ ವಾಂತಿ ಬೇಧಿ ಪ್ರಕರಣಗಳು ಸಂಭವಿಸದಂತೆ ಆರೋಗ್ಯ ಇಲಾಖೆಯು ಕೈಗೊಳ್ಳುವ ಜಾಗೃತಿ ಹಾಗೂ ತುರ್ತು ಚಿಕಿತ್ಸಾ ಕೇಂದ್ರದಲ್ಲಿ ನೀಡುವ ಚಿಕಿತ್ಸಾ ವ್ಯವಸ್ಥೆಯನ್ನು ಸದುಪಯೋಗ ಪಡೆದುಕೊಳ್ಳಲು ಸಾರ್ವಜನಿಕರಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ ಸುರೇಂದ್ರ ಬಾಬು ವಿನಂತಿಸಿದರು.**

ಸಿಂಧನೂರು ತಾಲುಕಿನ ಶ್ರೀಕ್ಷೇತ್ರ ಸೋಮಲಾಪೂರ ಅಂಭಾಮಠದಲ್ಲಿ ಅಮ್ಮನ ಜಾತ್ರಾ ಮಹೋತ್ಸವದ ಹಿನ್ನಲೆಯಲ್ಲಿ ಬೇಟಿ ನೀಡಿ ಆರೋಗ್ಯ ಸೇವೆಗಳನ್ನು ಖುದ್ದು ಪರಿಶೀಲಿಸಿ ಮಾತನಾಡುತ್ತಾ, ಈಗಾಗಲೆ ಎಲ್ಲ ನೀರಿನ ಮಾದರಿಗಳನ್ನು ನಿರಂತರವಾಗಿ ಕ್ಷೇತ್ರ ಸಿಬ್ಬಂದಿಯವರ ವೈದ್ಯಕೀಯ ತಂಡದ ಮೂಲಕ ಕ್ಲೋರಿನೆಷನ್ ಕೈಗೊಂಡು ಪರೀಕ್ಷೆಗೆ ಒಳಪಡಿಸಲಾಗಿದೆ. ಈಗಾಗಲೆ ಮಾನ್ಯ ಶಾಸಕರು ಹಾಗೂ ಜಿಲ್ಲಾಧಿಕಾರಿಗಳು ರವರ ಮಾರ್ಗದರ್ಶನದಲ್ಲಿ ಜಾತ್ರಾ ಸಮಿತಿ ಮೂಲಕ ಎರಡು ಕಡೆಗಳಲ್ಲಿ ತುರ್ತು ಚಿಕಿತ್ಸಾ ಕಿಯಾಸ್ಕ್‌ಗಳನ್ನು ಹಾಗೂ ಆಯುಷ್ಮಾನ್ ಆರೋಗ್ಯ ಕೇಂದ್ರದಲ್ಲಿ ತಾತ್ಕಾಲಿಕ ಚಿಕಿತ್ಸಾ ಕೇಂದ್ರ ಸ್ಥಾಪಿಸಲಾಗಿದೆ.

ಹಾಗೂ ಅಗತ್ಯ ಔಷಧಿ ದಾಸ್ತಾನುಗಳೊಂದಿಗೆ ದಿನದ ಇಪ್ಪನ್ನಾಲು ಗಂಟೆ ಕರ್ತವ್ಯ ನಿರ್ವಹಿಸಲು ವೈದ್ಯರು/ಸಿಬ್ಬಂದಿಗಳನ್ನು ದಿನಾಂಕ 7.01.2025 ರವರೆಗೆ ನಿಯೋಜಿಸಲಾಗಿದ್ದು, ಸಾಂಕ್ರಾಮಿಕ ರೋಗಗಳು ಹರಡದಂತೆ ಊಟದ ಪೂರ್ವ ಶೌಚದ ನಂತರ ಕೈಗಳನ್ನು ಸ್ವಚ್ಛವಾಗಿ ತೊಳೆದುಕೊಳ್ಳಲು ಆರೋಗ್ಯ ಶಿಕ್ಷಣವನ್ನು ಸಿಬ್ಬಂದಿಯವರು ನೀಡುತ್ತಿದ್ದಾರೆ, ಅಲ್ಲದೆ ಹೆಚ್ಚಿನ ಚಿಕಿತ್ಸೆ ಅಗತ್ಯವಿದ್ದಲ್ಲಿ ಮೆಲ್ಮಟ್ಟದ ಆಸ್ಪತ್ರೆಗೆ ಕರೆದುಕೊಂಡು ಹೋಗಲು ಆಂಬ್ಯುಲೆನ್ಸ್ ವ್ಯವಸ್ಥೆ ಕಲ್ಪಿಸಲಾಗಿದ್ದು ಯಾವುದೇ ಆರೋಗ್ಯ ಸಮಸ್ಯೆಗಳಿಗೆ ತಕ್ಷಣವೇ ತುರ್ತು ಚಿಕಿತ್ಸಾ ಕೇಂದ್ರದ ಸದುಪಯೋಗ ಪಡೆಯಲು ಎಂದು ವಿನಂತಿಸಿದರು. ಈ ಸಂದರ್ಭದಲ್ಲಿ ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ ಗಣೇಶ್ ಕೆ, ತಾಲೂಕಾ ಆರೋಗ್ಯಾಧಿಕಾರಿ ಡಾ ಅಯ್ಯನಗೌಡ ಸೇರಿದಂತೆ ವೈದ್ಯರು, ಸಿಬ್ಬಂದಿಯವರು ಉಪಸ್ಥಿತರಿದ್ದರು.

## ಅರಕೇರಾ: ಸ್ಪಂದನಸಿರಿ ಪತ್ತಿನ ಸೌಹಾರ್ದ ಸಹಕಾರಿ ಸಂಘ 2026 ನೇ ಕ್ಯಾಲೆಂಡರ್ ಬಿಡುಗಡೆ

ನೈಜ್ಯ ದೆಸೆ ನ್ಯೂಸ್

**ಅರಕೇರಾ: ಅರಕೇರಾ ಪಟ್ಟಣದಲ್ಲಿನ ಗಲಗ ರಸ್ತೆಯಲ್ಲಿ ಸ್ಪಂದನಸಿರಿ ಪತ್ತಿನ ಸೌಹಾರ್ದ ಸಹಕಾರಿ ಸಂಘ ನಿಯಮಿತ ಅರಕೇರಾದಲ್ಲಿ ನೂತನ 2026 ನೇ ವರ್ಷದ ಕ್ಯಾಲೆಂಡರ್‌ನ್ನು ಸಹಕಾರಿ ಅಧ್ಯಕ್ಷ ಚನ್ನಪ್ಪ ಪೈಕಾರ ಬಿಡುಗಡೆಗೊಳಿಸದರು.**



ಈ ಸಂದರ್ಭದಲ್ಲಿ ಮಾತನಡಿದ ಅವರು ಸಹಾರಿ ಸಂಘವು ಆರಂಭಗೊಂಡು 10 ವರ್ಷಪೂರ್ಣಗೊಂಡು ನಮ್ಮ ಸಹಕಾರಿ ಸಂಘವು ಉತ್ತಮ ಸಾಲಗಳನ್ನು ನೀಡುವುದರ ಜತೆಗೆ ಸಹಕಾರದೊಂದಿಗೆ ಉತ್ತಮ ಠೇವಣಿ ಸಂಗ್ರಹಿಸಿದೆ. ಗ್ರಾಹಕರು, ಶೇರುದಾರರು ಹಾಗೂ ಸಿಬ್ಬಂದಿಗಳ ಪರಿಶ್ರಮವಿದೆ. ಸಹಕಾರಿ ಸಂಘದ ಮೇಲಿನ ವಿಶ್ವಾಸದಿಂದ ವರ್ಷದಿಂದ ವರ್ಷಕ್ಕೆ ಸಹಕಾರಿಯು ಪ್ರಗತಿಹೊಂದಿದೆ ಎಂದರು. ಸಂದರ್ಭದಲ್ಲಿ ಚನ್ನವೀರಯ್ಯಸ್ವಾಮಿ ಹಿರೇಮಠ, ಪರಮೇಶಪೂಜಾರಿ. ಮಹೇಶಸ್ವಾಮಿ ಗಣೇಚಾರ್ಯ ಉಪಾಧ್ಯಕ್ಷರಾದ ಶಿವುಕುಂಆರ ಮಾದ್ವರ, ನಾಗರಾಜನಾಯಕ. ಅಯುಬಸಾಬ, ರೈಮನಸಾಬ ಖಾಜಿ. ಶಂಕ್ರಪ್ಪನಾಯಕ ಬಿ.ಸುರೇಶಗೌಡ ಕುರುಕುಂದಿ, ವೆಂಕಟೇಶನಾಯಕ, ಶಿವುಕಬ್ಬೇರ, ಚಾಂದಪಾಷ, ನಿರ್ದೇಶಕರು ಸೇರಿದಂತೆ ವ್ಯವಸ್ಥಾಪಕರಾದ ವೀರುಪಾಕ್ಷನಾಯಕ ಕರ್ನಾಳ, ಮುಖ್ಯ ಕಾರ್ಯನಿರ್ವಾಹಕ ಸಿದ್ದಪ್ಪ ಕಬ್ಬೇರ, ಕ್ಷೇತ್ರ ಅಧಿಕಾರಿ ಪ್ರೇಮಕುಮಾರನಾಯಕ, ಕ್ಯಾಷಯಿರ್ ಆಶಿಫ್ ಕರ್ನಲು, ಸಿಬ್ಬಂದಿಬಾಷಸಾಬ ಡಕಣಿ ಮುಂತಾದವರು ಉಪಸ್ಥಿತರಿದ್ದರು. ಚಿತ್ರಸುದ್ದಿ ಸಂಖ್ಯೆ 2(1) 2026 ನೇ ವರ್ಷದ ಕ್ಯಾಲೆಂಡರ್‌ನ್ನು ಸಹಕಾರಿ ಅಧ್ಯಕ್ಷ ಚನ್ನಪ್ಪ ಪೈಕಾರ ಬಿಡುಗಡೆಗೊಳಿಸದರು.

# ಮನುವಾದಿಗಳನ್ನು ಸೋಲಿಸೋಣ: ಎಂ.ಗಂಗಾಧರ

ನೈಜ್ಯ ದೆಸೆ ನ್ಯೂಸ್

**ಸಿಂಧನೂರು: 'ಭೀಮಾ ಕೊರೆಗಾಂವ್ ವಿಜಯೋತ್ಸವ ಆಚರಣೆ ಮಾಡುವುದು ಪ್ರತಿಯೊಬ್ಬರ ಜವಾಬ್ದಾರಿ. ವಿಜಯೋತ್ಸವದೊಂದಿಗೆ ಅಂಬೇಡ್ಕರ್, ಮಾರ್ಕ್ಸ್ ಚಿಂತನೆಗಳನ್ನು ಕಟ್ಟುತ್ತ ಮನುವಾದಿಗಳನ್ನು ಸೋಲಿಸೋಣ' ಎಂದು ಆಚರಣೆ ಸಮಿತಿ ಸಂಚಾಲಕ ಎಂ.ಗಂಗಾಧರ ಹೇಳಿದರು. ಗುರುವಾರ ನಗರದ ಪಿಡಬ್ಲ್ಯೂಡಿ ಕ್ಯಾಂಪ್‌ನ ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಪ್ರತಿಮೆ ಬಳಿ 208ನೇ ಭೀಮಾ ಕೊರೆಗಾಂವ್ ಕದನ ವಿಜಯೋತ್ಸವದ ಬೃಹತ್ ಬಹಿರಂಗ ಸಮಾವೇಶದಲ್ಲಿ ಅವರು ಮಾತನಾಡಿದರು.**

ಹಿರಿಯ ಹೋರಾಟಗಾರ ಡಿ. ಎಚ್.ಪೂಜಾರ ಮಾತನಾಡಿ 'ಫ್ಯಾಸಿಸ್ಟ್ ಶಕ್ತಿಗಳನ್ನು ಸೋಲಿಸಲು ಪರ್ಯಾಯ ಪಸಂಚಲನ ಅವಶ್ಯ. ಜಾತಿ, ಮತ ಬಿಡಿ; ಮಾನವತೆಗೆ ಜೀವ ಕೊಡಿ ಎಂಬ ಚಳವಳಿ ತೀವ್ರಗೊಳ್ಳಬೇಕು' ಎಂದರು. ಚಲುವಾದಿ ಮಹಾಸಭಾ ಅಧ್ಯಕ್ಷ ರಾಮಣ್ಣ




ಗೋನ್ವಾರ, ಮುಖಂಡರಾದ ಮರಿಯಪ್ಪ, ಅಮರೇಶ ಗಿರಿಜಾಲಿ, ಪ್ರವೀಣ ಧುಮತಿ, ನಾಗವೇಣಿ ಪಾಟೀಲ, ಬಸವರಾಜ ಬಾದರ್ಲಿ, ಶಂಕರ ಗುರಿಕಾರ, ಮರಿಲಿಂಗಪ್ಪ, ಮುತ್ತು ಸಾಗರ, ಅಂಬ್ರುಸ್‌ಕೊಡ್ಲಿ, ನಿರುಪಾದಿ ಸಾಸಲಮರಿ, ಹೊನ್ನೂರು ಕಟ್ಟಿಮನಿ, ಬಸವರಾಜ ಬಾಗಲವಾಡ, ನಾರಾಯಣ ಬೆಳಗುರ್ಕಿ, ಮೌನೇಶ್ ಜಾಲವಾಡಗಿ ಮಾತನಾಡಿದರು. ಇದಕ್ಕೂ ಮುನ್ನ ತಾಲ್ಲೂಕು ಪಂಚಾಯತ್ ಆವರಣದಲ್ಲಿನ ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಪುತ್ಥಳಿಗೆ ಮಾಲಾರ್ಪಣೆ ಮಾಡಿ ಡಾ.ಕೆ.ಶಿವರಾಜ ಪಥ ಸಂಚಲನವನ್ನು ಉದ್ಘಾಟಿಸಿ ಚಾಲನೆ ನೀಡಿದರು.

ಪಥ ಸಂಚಲನ: ತಾಲ್ಲೂಕು ಪಂಚಾಯಿತಿ ಅಂಬೇಡ್ಕರ್ ಪ್ರತಿಮೆಗೆ ಮಾಲಾರ್ಪಣೆ ಮಾಡಿದ ನಂತರ ನೂರಾರು ಕಾರ್ಯಕರ್ತರು ಪಿಡಬ್ಲ್ಯೂಡಿ ಕ್ಯಾಂಪ್‌ನ ಅಂಬೇಡ್ಕರ್ ವೃತ್ತದ ವರೆಗೆ ವಿಜಯ ಘೋಷಣೆಗಳನ್ನು ಕೂಗುತ್ತಾ ಮೆರವಣಿಗೆ ನಡೆಸಿದರು. ಬಸವರಾಜ ಎಕ್ಕಿ, ಹೆಚ್.ಆರ್.ಹೊಸಮನಿ, ಮುದಿಯಪ್ಪ ಸೇರಿದಂತೆ ಕ್ರಾಂತಿಕಾರಿ ಸಾಂಸ್ಕೃತಿಕ ವೇದಿಕೆ ಆರ್‌ಸಿಎಫ್ ಕಲಾ ತಂಡದಿಂದ ಭೀಮಾ ಕೊರೆಗಾಂವ ಹಾಗೂ ಅಂಬೇಡ್ಕರ್ ಕುರಿತು ಕ್ರಾಂತಿಗೀತೆಗಳನ್ನು ಹಾಡಿದರು.

ಕಾರ್ಯಕ್ರಮದಲ್ಲಿ ಮುಖಂಡರಾದ ಹನುಮಂತ ಗೋಮರ್ಸಿ, ಹಾರೂನ್‌ಪಾಷಾ ಜಾಗಿರದಾರ, ನರಸಪ್ಪ ಕಟ್ಟಿಮನಿ, ಅಯ್ಯಪ್ಪ ವಕೀಲ, ಮೌಲಪ್ಪ ವಕೀಲ, ಹನುಮಂತಪ್ಪ ಗೋಮರ್ಸಿ, ಚನ್ನಬಸವರಾಜ ಕುನ್ನಟಗಿ, ಹುಲುಗಪ್ಪ ಮಲ್ಲಾಪುರ, ಹುಸೇನಪ್ಪ ಗೊರೇಬಾಳ, ಕರಿಯಪ್ಪ ಮಾಡಸಿರವಾರ, ಹಂಸರಾಜ ಮಾಡಸಿರವಾರ, ಚಂದ್ರು ಸಿದ್ರಾಮಪುರ, ಶರಣಬಸವ ಮಲ್ಲಾಪುರ, ದುರುಗಪ್ಪ ಮಲ್ಲಾಪುರ, ವಿರೂಪಣ್ಣ ಬೂದಿಹಾಳ, ವೀರೇಶ್ ಹಂಚಿನಾಳ, ಮಾರೆಪ್ಪ ರಾಮತ್ನಾಳ, ಶರಣಪ್ಪ ಸೋಮನಾಳ, ಶರಣಬಸವ ಭಾಗವಹಿಸಿದ್ದರು.

# ಶಾಸಕ ಹಂಪನಗೌಡ ಬಾದರ್ಲಿ 75ನೇ ಜನ್ಮದಿನ ಕಾರ್ಯಕ್ರಮಕ್ಕೆ ಗಣ್ಯರ ಸಮಾಗಮ

ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ನಗರದ ಟೌನ್‌ಹಾಲ್‌ನಲ್ಲಿ ಜ 1 ರಂದು ಭಾವಪೂರ್ಣವಾಗಿ ನಡೆದ ಶಾಸಕ ಹಂಪನಗೌಡ ಬಾದರ್ಲಿ ಅವರ 75ನೇ ಜನ್ಮದಿನೋತ್ಸವಕ್ಕೆ ಅಭಿಮಾನಿಗಳು, ನಾಯಕರು, ಹಿತೈಷಿಗಳು ಹಾಗೂ ವಿವಿಧ ಸಂಘಟನೆಗಳ ಸದಸ್ಯರಿಂದ ಭಾರೀ ಪ್ರತಿಕ್ರಿಯೆ ದೊರೆಯಿತು. ನಗರದಲ್ಲಿ ಜನಪ್ರತಿನಿಧಿಯನ್ನು ಗೌರವಿಸುವ ಉದ್ದೇಶದಿಂದ ಆಯೋಜಿಸಿದ್ದ ಈ ಕಾರ್ಯಕ್ರಮವು ಹಬ್ಬದ ಸಂಭ್ರಮದ ವಾತಾವರಣವನ್ನು ಮೂಡಿಸಿತು.**

ಸಮಾರಂಭದಲ್ಲಿ ಭಾಗವಹಿಸಿದ ಗಣ್ಯರು ಶಾಸಕರ ಸಾರ್ವಜನಿಕ ಬದುಕು, ಸೇವಾಸ್ಫೂರ್ತಿ ಹಾಗೂ ಸಿಂಧನೂರಿನ ಅಭಿವೃದ್ಧಿಗೆ ನೀಡಿದ ಕೊಡುಗೆಗಳನ್ನು ನೆನಪಿಸಿಕೊಂಡು ಗೌರವಿಸಿದರು. ಬಾದರ್ಲಿ ಅವರು ತಮ್ಮ ರಾಜಕೀಯ ಬದುಕಿನ ಸಾಲುಸಾಲು ಹಾದಿಯನ್ನು ನೆನಪಿಸಿಕೊಂಡು, ಜನತೆಯ ನಂಬಿಕೆ, ಪ್ರೀತಿ ಮತ್ತು ಆಶೀರ್ವಾದವೇ ನನಗೆ ಶಕ್ತಿ ಎಂಬುದಾಗಿ ಹೇಳಿದರು. ವಿವಿಧ ಸಂಘಟನೆಗಳು, ರೈತರ ಬಳಗ, ಯುವಕರ



ತಂಡಗಳು ಹಾಗೂ ಸಿಂಧನೂರಿನ ಸಾರ್ವಜನಿಕರು ದೊಡ್ಡ ಸಂಖ್ಯೆಯಲ್ಲಿ ಆಗಮಿಸಿ ಶಾಸಕರಿಗೆ ಹಾರೈಕೆ ಸಲ್ಲಿಸಿದರು. ನೆರೆಹೊರೆಯ ಗ್ರಾಮಗಳಿಂದಲೂ ಅಭಿಮಾನಿಗಳು ಆಗಮಿಸಿದ್ದರಿಂದ ಟೌನ್‌ಹಾಲ್ ಪ್ರದೇಶದಲ್ಲಿ ವಿಶೇಷ ಚೈತನ್ಯ ಕಂಡುಬಂತು.

ಕಾರ್ಯಕ್ರಮದಲ್ಲಿ ಕೇಕ್ ಕಟ್, ಸ್ಮರಣಿಕೆ ಪ್ರದಾನ, ಹೂಗುಚ್ಛ, ಶಾಲು?ಶ್ರೀಫಲ ವಂದನೆ ನಡೆಯಿತು. ಸಾರ್ವಜನಿಕರಿಂದ ಬಂದ ಅನೇಕ ಶುಭಾಶಯ ಸಂದೇಶಗಳನ್ನು ಕಾರ್ಯಕ್ರಮದಲ್ಲಿ ಓದಿಕೋಡಲಾಯಿತು. ವೇದಿಕೆಯಲ್ಲಿ ಮಾತನಾಡಿದ ಗಣ್ಯರು, ಬಾದರ್ಲಿ ಅವರ 40 ವರ್ಷಗಳ ಸಾರ್ವಜನಿಕ ಸೇವೆ ಸಿಂಧನೂರಿನ ರೈತ?ಕಾರ್ಮಿಕ?ಬಡವರ ಕಲ್ಯಾಣಕ್ಕಾಗಿ ಕೈಗೊಂಡ ಯೋಜನೆಗಳು ಸಮಾಜ ಮತ್ತು ಧರ್ಮಗಳ ನಡುವೆ ಐಕ್ಯತೆಯನ್ನು ಕಾಪಾಡಲು ಅಭಿನವ ಪ್ರಯತ್ನಗಳು ಇವುಗಳನ್ನು ನೆನಪಿಸಿಕೊಂಡು ಅವರ ಸೇವಾಭಾವವನ್ನು ಶ್ಲಾಘಿಸಿದರು. ಜನರ ಸಮಸ್ಯೆಗಳಿಗೆ ತಕ್ಷಣ ಸ್ಪಂದಿಸುವುದು, ನೆಲದೊಡನೆ ಬೆರೆಯುವ ಸ್ವಭಾವ, ಮತ್ತು ಪಕ್ಷದ ಕಾರ್ಯಕರ್ತರಿಗೆ ನೀಡುವ ಪ್ರೋತ್ಸಾಹ ಇವೇ ಬಾದರ್ಲಿ ಅವರ ಜನಪ್ರೀಯತೆಯ ಮೂಲ ಎಂದು ಅತಿಥಿಗಳು ಅಭಿಪ್ರಾಯಪಟ್ಟರು.

ಶಾಸಕ ಬಾದರ್ಲಿ ಪ್ರತಿಕ್ರಿಯೆ

ಶಾಸಕ ಹಂಪನಗೌಡ ಬಾದರ್ಲಿ ಮಾತನಾಡಿ, "ಜನತೆ ನನಗೆ ನೀಡಿರುವ ಪ್ರೀತಿ?ಗೌರವವೇ ನನಗೆ ನಿಜವಾದ ಸಂಪತ್ತು. ನಾನು ಪಡೆದಿರುವ ಅಧಿಕಾರ ಜನಸೇವೆಗೆ ಮಾತ್ರ. ಸಿಂಧನೂರಿನ ಅಭಿವೃದ್ಧಿಯೇ ನನ್ನ ಆದ್ಯತೆ," ಟೀಕೆಗಳು ಸಾಯುತ್ತವೆ ಕೆಲಸಗಳು ಉಳಿಯುತ್ತವೆ ಎನ್ನುವ ರಾಷ್ಟ್ರಕವಿ ಕುವೆಂಪು ಅವರ ಸಂದೇಶದಂತೆ ನನ್ನ ಜೀವನ ಮತ್ತು ರಾಜಕೀಯ ಸೋಲುಗೆಲುವಿನಲ್ಲೂ ಸದಾ ನನ್ನೊಡಗೂಡಿದ್ದೂ ಜನುಮ ದಿನದಂದು ಶುಭಹಾರೈಸಿ, ಹರಸಿರುವ ಕಾಂಗ್ರೆಸ್ ಪಕ್ಷದ ಹಿರಿಯರಿಗೂ, ಚುನಾಯಿತ ಪ್ರತಿನಿಧಿಗಳಿಗೂ, ಯುವಕರಿಗೂ, ಬೆಂಬಲಿಗರಿಗೂ ಹಾಗೂ ಅಪಾರ ಜನತೆಗೆ ಮನದುಂಬಿ ಕೃತಜ್ಞತೆಗಳನ್ನು ಸಲ್ಲಿಸಿ ಭಾವಪೂರ್ಣವಾಗಿ ಪ್ರತಿಕ್ರಿಯಿಸಿದರು.ಟೌನ್‌ಹಾಲ್ ಪ್ರವೇಶದ್ವಾರದಿಂದಲೇ ಹಾರೈಕೆ ಫ್ಲೆಕ್ಸಿಗಳು, ಬ್ಯಾನರ್‌ಗಳು, ಪೋಸ್ಟರ್‌ಗಳು ಅಲಂಕರಣಗೊಂಡಿದ್ದು ಈ ಕಾರ್ಯಕ್ರಮಕ್ಕೆ ಸೋಮನಾಥ ಶಿವಾಚಾರ್ಯರು ವಿಶೇಷ ಅತಿಥಿಗಳಾಗಿ ಹಾಜರಿದ್ದು ಶಾಸಕರಿಗೆ ಆಶೀರ್ವಚನ ನೀಡಿದರು.

ವೀರಶೈವ ಲಿಂಗಾಯತ ಮಹಾಸಭಾ ರಾಜ್ಯ ಘಟಕದ ಅಧ್ಯಕ್ಷ ಶಂಕರ ಬಿದರಿ, ಮಾಜಿ ಸಚಿವ ಅಮರೇಗೌಡ ಪಾಟೀಲ್ ಬಯ್ಯಾಪುರ, ಮಾಜಿ ಸಂಸದ ಕೆ. ವಿರೂಪಾಕ್ಷಪ್ಪ, ಮಸ್ಕಿ ಶಾಸಕ ಆರ್. ಬಸನಗೌಡ ತುರ್ವಿಹಾಳ, ಮಾಜಿ ಶಾಸಕ ಪ್ರತಾಪಗೌಡ ಪಾಟೀಲ್, ನಾಯಕ ಆರ್. ತಿಮ್ಮಯ್ಯ, ಎಸ್.ಬಿ. ಅಶೋಕ ಭೂಪಾಲ್, ಡಾ. ಬಿ.ಎನ್. ಪಾಟೀಲ್, ವಿಕಾಸ ಬ್ಯಾಂಕ್‌ನ ಅಧ್ಯಕ್ಷ ವಿಶ್ವನಾಥ ಚ. ಹಿರೇಮಠ, ಖಾಜಿ ಮಲಿಕ್ , ಬಾಬಾಗೌಡ , ವಕೀಲ ಎಂ. ಕಾಳಿಂಗಪ್ಪ, ಸೇರಿದಂತೆ ಕಾಂಗ್ರೆಸ್ ಕಾರ್ಯಕರ್ತರು,ಅನೇಕ ಅಭಿಮಾನಿಗಳು ಉಪಸ್ಥಿತರಿದ್ದರು.

## ನೇಮಕಾತಿ ಪ್ರಕಟಣೆ

ಆಧಾರ್ ಸೇವಾ ಕೇಂದ್ರ ನೇಮಕಾತಿ 2026 ? 282 ಆಧಾರ್ ಮೇಲ್ವಿಚಾರಕ/ಆಪರೇಟರ್ ಹುದ್ದೆಗಳಿಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿ ಆಧಾರ್ ಸೇವಾ ಕೇಂದ್ರ ನೇಮಕಾತಿ 2026: 282 ಆಧಾರ್ ಮೇಲ್ವಿಚಾರಕ/ಆಪರೇಟರ್ ಹುದ್ದೆಗಳಿಗೆ ಅರ್ಜಿ ಸಲ್ಲಿಸಿ. ಆಧಾರ್ ಸೇವಾ ಕೇಂದ್ರವು ಆಧಾರ್ ಮೇಲ್ವಿಚಾರಕ/ಆಪರೇಟರ್ ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಮತ್ತು ಆಸಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ಅಖಿಲ ಭಾರತ ಸರ್ಕಾರದಲ್ಲಿ ವೃತ್ತಿಜೀವನವನ್ನು ಹುಡುಕುತ್ತಿರುವ ಉದ್ಯೋಗಾಕಾಂಕ್ಷಿಗಳು ಈ ಅವಕಾಶವನ್ನು ಬಳಸಿಕೊಳ್ಳಬಹುದು. ಆಸಕ್ತ ಅಭ್ಯರ್ಥಿಗಳು ಜನವರಿ 31, 2026 ರಂದು ಅಥವಾ ಮೊದಲು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು. ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಪ್ರಾರಂಭ ದಿನಾಂಕ: 31–12–2025 ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 31–ಜನವರಿ–2026 ಅಧಿಕೃತ ವೆಬ್‌ಸೈಟ್: cscspv.in ಕೊನೆಯ ದಿನಾಂಕ: 31–ಜನವರಿ–2026

# ಸಿಂಧನೂರು ರಾಮಕೃಷ್ಣ ವಿವೇಕಾನಂದ ಆಶ್ರಮದಲ್ಲಿ ಕಲ್ಪತರು ದಿವಸ್ ಭಕ್ತಿ ಸಾನಿಧ್ಯದಲ್ಲಿ ವೈಭವಯುತ ಆಚರಣೆ

❑ ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ಸಿಂಧನೂರಿನ ಬಪ್ಪೂರು ರಸ್ತೆಯಲ್ಲಿರುವ ರಾಮಕೃಷ್ಣ ವಿವೇಕಾನಂದ ಆಶ್ರಮದಲ್ಲಿ ಜ 01 ಕಲ್ಪತರು ದಿವಸವನ್ನು ಅತ್ಯಂತ ಶ್ರದ್ಧೆ ಮತ್ತು ಭಕ್ತಿಭಾವದಿಂದ ಆಚರಿಸಲಾಯಿತು. ನೂತನ ವರ್ಷಾರಂಭದ ಈ ವಿಶೇಷ ದಿನದ ಅಂಗವಾಗಿ ಭಕ್ತರು ಆಶ್ರಮಕ್ಕೆ ಭಾರೀ ಸಂಖ್ಯೆಯಲ್ಲಿ ಆಗಮಿಸಿ, ಆಧ್ಯಾತ್ಮಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸಿದರು.**



ಬೆಳಗಿನ ಪ್ರಾರ್ಥನಾ ಕಾರ್ಯಕ್ರಮಗಳು ದಿವ್ಯತ್ರಯ (ಶ್ರೀರಾಮಕೃಷ್ಣ ಪರಮಹಂಸ, ಮಾತಾ ಶಾರದೇ ದೇವಿ ಹಾಗೂ ಸ್ವಾಮಿ ವಿವೇಕಾನಂದ)ರಿಗೆ ಪೂಜೆಯಿಂದ ಆರಂಭವಾಗಿ, ಮಂಗಳಾರತಿ, ಉಷಾಕೀರ್ತನೆ ಹಾಗೂ ವಿಷ್ಣು ಸಹಸ್ರನಾಮ ಪಾರಾಯಣದೊಂದಿಗೆ ಸುಂದರವಾಗಿ ಸಾಗಿದವು. ಭಕ್ತರ ಧಾರ್ಮಿಕ ಸ್ಪೂರ್ತಿಯಿಂದ ಆಶ್ರಮ ಪರಿಸರವೇ ಪಾವನ ವಾತಾವರಣವನ್ನು ಹೊಂದಿತು. ಸಂಜೆಯ ವೇಳೆಯ ಕಾರ್ಯಕ್ರಮಗಳು ಮತ್ತಷ್ಟು ವೈವಿಧ್ಯಮಯ ಮತ್ತು ಭಕ್ತಿಪೂರ್ಣವಾಗಿದ್ದು, ಶ್ರೀ ಲಲಿತಾ ಸಹಸ್ರನಾಮ ಪಾರಾಯಣದೊಂದಿಗೆ ಪ್ರಾರಂಭವಾಗಿ ಭಜನೆ, ಮಂಗಳಾರತಿ, ಭಗವನ್ನಾಮ ಸಂಕೀರ್ತನೆ, ಪುಷ್ಪಾರ್ಚನೆ ಮುಂತಾದ ಕಾರ್ಯಕ್ರಮಗಳು ನಡೆದವು.

ಭಜನೆ ಮತ್ತು ಸಂಕೀರ್ತನೆಯ ವೇಳೆ ಭಕ್ತರಿಂದ ಉತ್ಸಾಹಭರಿತ ಪ್ರತಿಕ್ರಿಯೆ ದೊರಕಿದ್ದು, ಎಲ್ಲರೂ ಆಧ್ಯಾತ್ಮಿಕ ಚೈತನ್ಯದಲ್ಲಿ ಲೀನರಾದರು. ಅಂತಿಮವಾಗಿ ಆಶ್ರಮದ ಅಧ್ಯಕ್ಷರಾದ ಪೂಜ್ಯ ಶ್ರೀ ಸ್ವಾಮಿ ಸದಾನಂದ ಮಹಾರಾಜರು ಭಕ್ತರನ್ನುದ್ದೇಶಿಸಿ ಮಾತನಾಡಿದರು. ಕಲ್ಪತರು ದಿವಸದ ವಿಶೇಷತೆ, ಇದರ ಇತಿಹಾಸ ಹಾಗೂ ಶ್ರೀರಾಮಕೃಷ್ಣ ಪರಮಹಂಸರ ಅನುಗ್ರಹದ ಮಹಿಮೆ ಕುರಿತು ಸವಿಸ್ತಾರವಾಗಿ ತಿಳಿಸಿದರು. "ಕಲ್ಪತರು ದಿವಸವು ಶ್ರೀರಾಮಕೃಷ್ಣ ಪರಮಹಂಸರ ದಯಾ–ಕರುಣೆಯ ಪ್ರತೀಕ. ಈ ದಿನದಲ್ಲಿ ಅವರ ಅನುಗ್ರಹ ಎಲ್ಲರಿಗೂ ಸಹಜವಾಗಿ ದೊರೆಯುತ್ತದೆ.


ಮನಸ್ಸಿನ ಶುದ್ಧಿ, ಭಕ್ತಿ ಹಾಗೂ ನಿಸ್ವಾರ್ಥ ಸೇವೆಗೇ ನಿಜವಾದ ಕಲ್ಪತರು." "ಒಬ್ಬ ಭಕ್ತನು ನಂಬಿಕೆ ಮತ್ತು ಶ್ರದ್ಧೆಯಿಂದ ಪ್ರಾರ್ಥಿಸಿದಾಗ ಆಧ್ಯಾತ್ಮಿಕ ಮಾರ್ಗದಲ್ಲಿ ಪ್ರಗತಿ ಕಾಣುತ್ತಾನೆ. ಕಲ್ಪತರು ದಿವಸ ಮಾನವೀಯತೆ, ಪ್ರೀತಿ ಮತ್ತು ಸೇವೆಯ ಮೌಲ್ಯಗಳನ್ನು ನಮ್ಮಲ್ಲಿ ಪುನಃ ನೆನೆಪಿಸುತ್ತದೆ."

"ಈ ದಿನ ದಿವ್ಯಾನಂದ, ದಯಾ ಹಾಗೂ ಆಶೀರ್ವಾದಗಳು ಸರ್ವರಿಗೂ ದೊರಕುವ ಶುಭದಿನ. ನಂಬಿಕೆಯೊಂದಿಗೆ ಪ್ರಾರ್ಥಿಸುವವನು ಆತ್ಮಶಕ್ತಿ ಮತ್ತು ಸದ್ಗುಣಗಳ ಸಂಪತ್ತನ್ನು ಪಡೆದುಕೊಳ್ಳುತ್ತಾನೆ" ಎಂದು ಮಹಾರಾಜರು ಭಕ್ತರಿಗೆ ಆಶೀರ್ವಚನ ನೀಡಿದರು.

## ಸಿದ್ದೇಶ್ವರ ಶ್ರೀಗಳ ದಾರಿಯಲ್ಲಿ ಸಾಗುವುದೇ ನಿಜವಾದ ಗುರುನಮನ

❑ ನೈಜ್ಯ ದೆಸೆ ನ್ಯೂಸ್

**ತಾಳಿಕೋಟಿ: ನೂರು ವರ್ಷಕ್ಕೆ ಕೋಟಿಗೊಬ್ಬ ಸಂತ ಜನಿಸುತ್ತಾನೆ ಅವನನ್ನು ಶತಮಾನದ ಸಂತ ಎಂದು ಕರೆಯುತ್ತಾರೆ ಅಂತಹ ಶ್ರೇಷ್ಠ ಸಂತ ಶ್ರೀ ಸಿದ್ದೇಶ್ವರ ಶ್ರೀಗಳಾಗಿದ್ದಾರೆ ಎಂದು ಖಾಸ್ಗತೇಶ್ವರ ಮಠದ ಬಾಲಶಿವಯೋಗಿ ಶ್ರೀ ಸಿದ್ದಲಿಂಗ ಮಹಾಸ್ವಾಮಿಗಳು ಹೇಳಿದರು. ಶುಕ್ರವಾರ ಪಟ್ಟಣದ ಶ್ರೀ ಬಸವೇಶ್ವರ ವೃತ್ತದ ಹತ್ತಿರ ಮಾನಸಿಂಗ್ ಕೊಕಟನೂರ ಗೆಳೆಯರ ಬಳಗದ ವತಿಯಿಂದ ಹಮ್ಮಿಕೊಂಡ ಪರಮಪೂಜ್ಯ ಸಿದ್ದೇಶ್ವರ ಶ್ರೀಗಳ 3ನೇ ವರ್ಷದ ನುಡಿ ನಮನ ಕಾರ್ಯಕ್ರಮದ ಸಾನಿಧ್ಯ ವಹಿಸಿ ಅವರು ಆಶೀರ್ವಚನ ನೀಡಿದರು.**



ಸಿದ್ದೇಶ್ವರ ಶ್ರೀಗಳು ಜ್ಞಾನ ಸಾಗರವಾಗಿದ್ದರು ಅವರ ಪ್ರವಚನಗಳು ಅತ್ಯಂತ ಪ್ರಭಾವಶಾಲಿಯಾಗಿದ್ದವು. ನಾವುಗಳು ಕೇವಲ ಮಾತನಾಡುತ್ತೇವೆ ಆದರೆ ಅವರು ಮಾತನಾಡಿದಂತೆ ನಡೆದು ತೋರಿಸಿದರು ಅವರ ನಡೆ ಮತ್ತು ನುಡಿ ಎರಡೂ ಒಂದಾಗಿದ್ದವು ಈ ಕಾರಣಕ್ಕಾಗಿಯೇ ಜಗತ್ತು ಅವರನ್ನು ಶತಮಾನದ ಸಂತ ಎಂದು ಒಪ್ಪಿಕೊಂಡಿತು. ಅವರು ಬದುಕಿನ ಪ್ರತಿ ಹಂತದಲ್ಲೂ ನಮಗೆ ಮಾರ್ಗದರ್ಶಕರಾಗಿದ್ದಾರೆ ಅವರಿಗಿಂತ ಶ್ರೇಷ್ಠ ಸ್ಪೂರ್ತಿದಾಯಕ ವ್ಯಕ್ತಿ ಇನ್ನೊಬ್ಬನಿಲ್ಲ, ಅವರು ಎಲ್ಲರನ್ನೂ ಪ್ರೀತಿಸುವುದನ್ನು ಕಲಿಸಿದರು ಯಾರನ್ನೂ ದ್ವೇಷಿಸಬೇಡಿ ಎಂದು ತಿಳಿಸಿದರು. ಅವರ ಈ ಶ್ರೇಷ್ಠ ಗುಣವನ್ನು ನಾವು ಜೀವನದಲ್ಲಿ ಅಳವಡಿಸಿಕೊಳ್ಳುವ ಶಪಥವನ್ನು ಇಂದಿನ ನುಡಿ ನಮನ ಕಾರ್ಯಕ್ರಮದಲ್ಲಿ ಮಾಡಬೇಕಾಗಿದೆ ಎಂದರು. ಶರಣ ಸಾಹಿತ್ಯ ಪರಿಷತ್ತಿನ ಜಿ ಎಸ್ ಜಮ್ಮಲದಿನ್ನಿ, ಪತ್ರಕರ್ತ ಅಬ್ದುಲ್ ಗನಿ ಮಕಾನದಾರ, ನ್ಯಾಯವಾದಿ ಗಂಗಾಧರ ಕಸ್ತೂರಿ ಹಾಗೂ ಹಿಂದೂ ಕಾರ್ಯಕರ್ತ ರಾಘವೇಂದ್ರ ವಿಜಾಪುರ ನುಡಿ ನಮನಗಳನ್ನು ಸಲ್ಲಿಸಿದರು.ಮಾನಸಿಂಗ್ ಕೊಕಟನೂರ ಗೆಳೆಯರ ಬಳಗದ ಅಧ್ಯಕ್ಷ ಎಂ.ಎಸ್.ಕೊಕಟನೂರ ನೇತೃತ್ವದಲ್ಲಿ ಕಾರ್ಯಕ್ರಮದ ಆರಂಭದಲ್ಲಿ ಸಿದ್ಧೇಶ್ವರ ಶ್ರೀಗಳ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಲಾಯಿತು. ವಚನ ಸಾಹಿತ್ಯ ಪರಿಷತ್ತ್ ಅಧ್ಯಕ್ಷ ಮಹಾಂತೇಶ ಮುರಾಳ ಕಾರ್ಯಕ್ರಮ ನಿರ್ವಹಿಸಿದರು. ಈ ಸಮಯದಲ್ಲಿ ನಿವೃತ್ತ ಪೊಲೀಸ್ ವರಿಷ್ಠಾಧಿಕಾರಿ ಎಸ್.ಬಿ. ಕಟ್ಟಿಮನಿ,ಡಾ.ವಿ.ಎಸ್.ಕಾರ್ಚಿ,ಬಿಜೆಪಿ ಜಿಲ್ಲಾ ಮಾಜಿ ಅಧ್ಯಕ್ಷ ಆರ್. ಎಸ್.ಪಾಟೀಲ(ಕೂಚಬಾಳ), ಎಚ್.ಎಸ್.ಪಾಟೀಲ(ಬಾವೂರ), ಕಾಶಿನಾಥ ಮುರಾಳ, ಎಂ.ಎಸ್. ಸರಶಟ್ಟಿ,ಬಿಜೆಪಿ ದುರೀಣೆ ಸುವರ್ಣಾ ಬಿರಾದಾರ, ಮುತ್ತು ಕಶಟ್ಟಿ, ದ್ಯಾಮನಗೌಡ ಪಾಟೀಲ,ನ್ಯಾಯವಾದಿ ಎಂ ಕೆ ಮೇತ್ರಿ,ಅಮಿತಸಿಂಗ್ ಮನಗೂಳಿ,ನಾಗೇಶ ಕಟ್ಟಿಮನಿ, ಮುಸ್ಲಿಂ ಬ್ಯಾಂಕ್ ಅಧ್ಯಕ್ಷ ಮಹಬೂಬ ಕೆಂಭಾವಿ, ವೀರೇಶ ಬಾಗೇವಾಡಿ, ಅಮಿತಸಿಂಗ್ ಮನಗೂಳಿ, ಬಸವರಾಜ ಮದರಕಲ್ಲ,ರಾಮನಗೌಡ ಬಾಗೇವಾಡಿ,–ಎಂ.ಎಸ್.ನಾಗರಾಳ, ಈಶ್ವರ ಹೂಗಾರ,ರಾಘು ಮಾನೆ, ಶಫೀಕ ಇನಾಮದಾರ, ಗೋಪಾಲ ಕಟ್ಟಿಮನಿ, ಬಳಗದ ಪದಾಧಿಕಾರಿಗಳಾದ ರವಿ ಚಂದುಕರ್, ಸಂಜು ಹಜೇರಿ, ಪರಶುರಾಮ ತಂಗಡಗಿ,ರಾಜು ಸಜ್ಜನ,ಅಶೋಕ ಚಿನಗುಡಿ, ದತ್ತು ಉಬಾಳೆ, ಜಗದೀಶ ಬಿಳೆಭಾವಿ ಹಾಗೂ ಸರ್ವ ಸಮಾಜದ ಬಾಂಧವರು ಇದ್ದರು.

# ಕಸಾಪದಿಂದ ಜ.4ರಂದು ಜಿಲ್ಲಾ ಮಟ್ಟದ ಕಾವ್ಯ ಕಮ್ಮಟ :ಹೆಚ್.ಎಫ್. ಮಸ್ಕಿ

❑ ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಹಾಗೂ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಸಂಯುಕ್ತಾಶ್ರಯದಲ್ಲಿ ಜನವರಿ 4ರಂದು ನಗರದ ಎವಿಎಸ್ ಬ್ರಿಲಿಯಂಟ್ ಕಾಲೇಜಿನಲ್ಲಿ ಜಿಲ್ಲಾ ಮಟ್ಟದ ಕಾವ್ಯ ಕಮ್ಮಟವನ್ನು ಹಮ್ಮಿಕೊಳ್ಳಲಾಗಿದೆ ಎಂದು ಕಸಾಪ ತಾಲ್ಲೂಕಾಧ್ಯಕ್ಷ ಹೆಚ್.ಎಫ್. ಮಸ್ಕಿ ತಿಳಿಸಿದ್ದಾರೆ.**

ಶುಕ್ರವಾರ ನೀಡಿದ ಹೇಳಿಕೆಯಲ್ಲಿ ಅವರು, ಕಾರ್ಯಕ್ರಮವನ್ನು ಹಂಪಿ ಕನ್ನಡ ವಿಶ್ವವಿದ್ಯಾಲಯದ ವಿಮರ್ಶಕ ಡಾ. ವೆಂಕಟಗಿರಿ ದಳವಾಯಿ ಉದ್ಘಾಟಿಸಲಿದ್ದು, ಕಸಾಪ ಜಿಲ್ಲಾಧ್ಯಕ್ಷ ರಂಗಣ್ಣ ಪಾಟೀಲ್ ಅಳ್ಳುಂಡಿ ಆಶಯ ನುಡಿ ವ್ಯಕ್ತಪಡಿಸಲಿದ್ದಾರೆ ಎಂದು ತಿಳಿಸಿದರು. ಕನ್ನಡ ಸಾಹಿತ್ಯ ಪರಿಷತ್ತಿನ ಜಿಲ್ಲಾ ಪ್ರತಿನಿಧಿಗಳು ಹಾಗೂ ವಿವಿಧ ಸಂಘ–ಸಂಸ್ಥೆಗಳ ಪದಾಧಿಕಾರಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ.ಮೊದಲನೇ ಗೋಷ್ಠಿ : "ಆಧುನಿಕ ಕನ್ನಡ ಕಾವ್ಯ ಪರಂಪರೆ" ಸಂಪನ್ಮೂಲ ವ್ಯಕ್ತಿ : ಡಾ. ವೆಂಕಟಗಿರಿ ದಳವಾಯಿ ಅಧ್ಯಕ್ಷತೆ : ಎಸ್. ಶರಣೇಗೌಡ, ಜಿಲ್ಲಾ ಕಸಾಪ ಮಾಜಿ ಅಧ್ಯಕ್ಷ ಪ್ರತಿಕ್ರಿಯೆ : ಡಾ. ಕೆ. ಖಾದರ್ ಭಾಷಾ, ಪ್ರಾಚಾರ್ಯ, ತುರ್ವಿಹಾಳ ಸರ್ಕಾರಿ ಪ್ರಥಮ ದರ್ಜೆ ಕಾಲೇಜು



ಅಯ್ಯಪ್ಪ ಮೇಟಿ, ಮುಖ್ಯಗುರು, ಅಲಬನೂರು ಸರ್ಕಾರಿ ಪ್ರೌಢಶಾಲೆ ಹುಸೇನಪ್ಪ ಅಮರಾಪುರ, ಅಧ್ಯಕ್ಷರು, ದಲಿತ ಸಾಹಿತ್ಯ ಪರಿಷತ್ತು ಎರಡನೇ ಗೋಷ್ಠಿ : "ಅನುವಾದ ಕಾವ್ಯ ಆಶಯ ಮತ್ತು ಅಭಿವ್ಯಕ್ತಿ" ಸಂಪನ್ಮೂಲ ವ್ಯಕ್ತಿ : ಡಾ. ಜಾಜಿ ದೇವೇಂದ್ರಪ್ಪ, ಸದಸ್ಯರು, ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಬೆಂಗಳೂರು ಅಧ್ಯಕ್ಷತೆ : ರಮಾದೇವಿ ಶಂಭೋಜಿ, ಜಿಲ್ಲಾ ಪ್ರತಿನಿಧಿ, ಕಸಾಪ ಪ್ರತಿಕ್ರಿಯೆ : ಗಜಲ್ ಕವಿ ಡಾ. ಶರೀಫ್ ಹಸಮಕಲ್ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಶರಣಪ್ಪ ಹೊಸಳ್ಳಿ ದಸಾಪದ ಪ್ರ. ಕಾರ್ಯದರ್ಶಿ ರಾಮಣ್ಣ ಹಿರೇಬೇರಗಿ ಸಮಾರೋಪ ಸಮಾರಂಭಕ್ಕೆ ಕಸಾಪ ತಾಲ್ಲೂಕಾಧ್ಯಕ್ಷ ಹೆಚ್.ಎಫ್. ಮಸ್ಕಿ ಅಧ್ಯಕ್ಷತೆ ವಹಿಸಲಿದ್ದು, ಲೇಖಕಿ ಡಾ. ರೇಣುಕಾ ಕೋಡಗುಂಟಿ ಸಮಾರೋಪ ನುಡಿಯನ್ನು ಪ್ರಸ್ತಾಪಿಸಲಿದ್ದಾರೆ. ಜಿಲ್ಲಾ ಹಾಗೂ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಪದಾಧಿಕಾರಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ. ಕನ್ನಡ ಸಾಹಿತ್ಯಾಸಕ್ತರು, ವಿದ್ಯಾರ್ಥಿಗಳು ಮತ್ತು ಯುವಜನರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕೆಂದು ಹೆಚ್.ಎಫ್. ಮಸ್ಕಿ ಮನವಿ ಮಾಡಿದ್ದಾರೆ.

# ರಾಯಚೂರು ಜಿಲ್ಲೆಗೆ ಅರುಣಾಂಶು ಗಿರಿ ಹೊಸ ಎಸ್‌ಪಿ



❑ ನೈಜ್ಯ ದೆಸೆ ನ್ಯೂಸ್

**ರಾಯಚೂರು: ಸಿಐಡಿ ಎಸ್‌ಪಿ ಅರುಣಾಂಶು ಗಿರಿ ಅವರು ರಾಯಚೂರಿನ ನೂತನ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಯಾಗಿ ನೇಮಕಗೊಂಡಿದ್ದಾರೆ. ಸಿಐಡಿ ಎಸ್‌ಪಿ ಹುದ್ದೆಯಿಂದ ಅವರಿಗೆ ರಾಯಚೂರಿಗೆ ವರ್ಗವಾಗಿದೆ. 2015ರ ಬ್ಯಾಚ್‌ನ ಐಪಿಎಸ್ ಅಧಿಕಾರಿಯಾಗಿರುವ ಇವರು ಹಿಂದೆ ಮಂಗಳೂರು ನಗರದ ಡಿಸಿಪಿ (ಕಾನೂನು ಮತ್ತು ಸುವ್ಯವಸ್ಥೆ) ಆಗಿ ಕಾರ್ಯನಿರ್ವಹಿಸಿದ್ದಾರೆ.**

**ಬಿಇ, ಎಂಬಿಎ ಪದವೀಧರರಾಗಿರುವ ಅರುಣಾಂಶು ಗಿರಿ ಪಶ್ಚಿಮ ಬಂಗಾಳ ಮೂಲದವರು.**

ಹಿಂದೆ ಮಂಗಳೂರು ನಗರದ ಡಿಸಿಪಿ (ಕಾನೂನು ಮತ್ತು ಸುವ್ಯವಸ್ಥೆ), ಕೊಪ್ಪಳದ ಎಸ್ಪಿ ಆಗಿ ಕಾರ್ಯನಿರ್ವಹಿಸಿದ್ದಾರೆ. ರಾಯಚೂರು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಯಾಗಿದ್ದ ಎಂ.ಪುಟ್ಟಮಾದಯ್ಯ ಅವರಿಗೆ ಕಲಬುರಗಿಯ ಪಿಟಿಸಿ ಪ್ರಾಂಶುಪಾಲ ಡಿಐಜಿಪಿ ಹುದ್ದೆಗೆ ಮುಂಬಡ್ತಿ ನೀಡಲಾಗಿದೆ.

ಬೀಳ್ಕೊಡುಗೆ: ಮುಂಬಡ್ತಿ ಹೊಂದಿರುವ ಎಂ.ಪುಟ್ಟಮಾದಯ್ಯ ಅವರಿಗೆ ಜಿಲ್ಲಾ ಪೊಲೀಸ್ ಮುಖ್ಯಾಲಯದಲ್ಲಿ ಗುರುವಾರ ಬೀಳ್ಕೊಡಲಾಯಿತು. ಜಿಲ್ಲಾ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿಗಳಾದ ಹರಿಶ್ ಹಾಗೂ ಕುಮಾರ ಸ್ವಾಮಿ ಅವರು ಪುಟ್ಟಮಾದಯ್ಯ ಅವರಿಗ ಶಾಲು ಹೊದಿಸಿ ಸನ್ಮಾನಿಸಿದರು.

ಪೊಲೀಸ್ ಅಧಿಕಾರಿಗಳು ಹಾಗೂ ಕಚೇರಿ ಸಿಬ್ಬಂದಿ ಉಪಸ್ಥಿರಿದ್ದರು ರಾಯಚೂರಿನ ಜಿಲ್ಲಾ ಪೊಲೀಸ್ ಮುಖ್ಯಾಲಯದಲ್ಲಿ ಗುರುವಾರ ಮುಂಬಡ್ತಿ ಹೊಂದಿರುವ ಎಂ.ಪುಟ್ಟಮಾದಯ್ಯ ಅವರಿಗೆ ಜಿಲ್ಲಾ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿಗಳಾದ ಹರಿಶ್ ಹಾಗೂ ಕುಮಾರ ಸ್ವಾಮಿ ಅವರು ಪುಟ್ಟ ಮಾದಯ್ಯ ಅವರಿಗ ಶಾಲು ಹೊದಿಸಿ ಸನ್ಮಾನಿಸಿದರು.

# ಲೋಕಾಯುಕ್ತ ಅಧಿಕಾರಿಗಳ ದಿಡೀರ್ ಭೇಟಿ, ಸರಕಾರಿ ಕಚೇರಿಗಳಲ್ಲಿ ಕಡತಗಳ ಪರಿಶೀಲನೆ

❑ ನೈಜ್ಯ ದೆಸೆ ನ್ಯೂಸ್

**ಲಿಂಗಸಗೂರು: ಜ 3 ಜ 07 ರಂದು ರಾಯಚೂರು ಜಿಲ್ಲೆಗೆ ಲೋಕಾಯುಕ್ತ ಅಧಿಕಾರಿಗಳು ಭೇಟಿ ನೀಡಲಿರುವ ಹಿನ್ನೆಲೆ ತಾಲೂಕಡಳಿತ ಹಾಗೂ ವಿವಿಧ ಸರ್ಕಾರಿ ಇಲಾಖೆಗಳು ಅಲರ್ಟ್ ಆಗಿರುವ ಮಧ್ಯೆ, ಲೋಕಾಯುಕ್ತ ಅಧಿಕಾರಿಗಳು ದಿಢೀರಾಗಿ ತಾಲೂಕಿನ ವಿವಿಧ ಇಲಾಖೆಯಲ್ಲಿ ಪರಿಶೀಲನೆ ನಡೆಸಿದ್ದಾರೆ.**

ತಾಲೂಕಿನ ತಹಸೀಲ್ದಾರ್ ಕಚೇರಿ, ಉಪ ನೋಂದಣಿ ಕಚೇರಿ , ಹಾಗೂ ಪುರಸಭೆ ಕಚೇರಿಗಳಿಗೆ ಲೋಕಾಯುಕ್ತ ಅಧಿಕಾರಿಗಳ ತಂಡಗಳು ಏಕಾಏಕಿ ಭೇಟಿ ನೀಡಿ ಪರಿಶೀಲನೆ ನಡೆಸಿದ್ದು, ಅಧಿಕಾರಿಗಳು ಹಾಗೂ ಸಿಬ್ಬಂದಿಯಲ್ಲಿ ಆತಂಕದ ವಾತಾವರಣ ನಿರ್ಮಾಣವಾಗಿದೆ.





ಪಟ್ಟಣದ ಎಲ್ಲಾ ಸರಕಾರಿ ಕಚೇರಿಗಳಲ್ಲಿ ಲಂಚ ಹಾಗೂ ಮಧ್ಯವರ್ತಿಗಳ ಆಕ್ರಮ ಹಾವಳಿ ಕುರಿತಾಗಿ ಸಾರ್ವಜನಿಕರಿಂದ ಬಂದ ದೂರಿನ ಮೇರೆಗೆ ಲೋಕಾಯುಕ್ತ ಅಧಿಕಾರಿಗಳ ತಂಡ ಮಿನಿ ವಿಧಾನಸೌಧದ ಮೇಲೆ ಏಕಾಏಕಿ ದಾಳಿ ನಡೆಸಿದ್ದಾರೆ. ಪಟ್ಟಣದ ತಹಶೀಲ್ದಾರ ಕಚೇರಿ, ಉಪ ನೋಂದಣಿ ಅಧಿಕಾರಿಗಳ ಕಚೇರಿ ಹಾಗೂ ಪುರಸಭೆ ಕಾರ್ಯಾಲಯಗಳಲ್ಲಿ ಏಕಕಾಲಕ್ಕೆ ದಾಳಿ ನಡೆಸಿದ ಲೋಕಾಯುಕ್ತ ತಂಡ, ಕಡತ ಹಾಗೂ ದಾಖಲೆಗಳ ಹಾಗೂ ವ್ಯವಹಾರ ಸಂಬಂಧಿತ ದಾಖಲೆಗಳ ಪರಿಶೀಲನೆ ನಡೆಸುತ್ತಿದ್ದಾರೆ.

ಸಾರ್ವಜನಿಕರ ಕೆಲಸಗಳನ್ನು ಎಲ್ಲಾ ಸರಕಾರಿ ಕಚೇರಿ ಗಳಲ್ಲಿ ನೇರವಾಗಿ ಮಾಡಿಸಿ ಕೊಳ್ಳಲು ಸಾಧ್ಯ ವಾಗದೇ ಮಧ್ಯವರ್ತಿಗಳ ಮೂಲಕವೇ ಕೆಲಸ ಮಾಡಿಸಿಕೊಳ್ಳುವ ಪರಿಸ್ಥಿತಿ ನಿರ್ಮಾಣವಾಗಿದೆ ಎಂಬ ಆರೋಪಗಳು ಕೇಳಿಬಂದಿದ್ದವು.

ವಿವಿಧ ಕೆಲಸಗಳಿಗೆ ಲಂಚ ಬೇಡಿಕೆ ಮಾಡಲಾಗುತ್ತಿದೆ ಎಂಬ ಸಾರ್ವಜನಿಕ ದೂರಿನ ಹಿನ್ನೆಲೆಯಲ್ಲಿ ದಾಳಿ ನಡೆದಿದೆ ಎಂದು ತಿಳಿದುಬಂದಿದೆ. ದಾಳಿಯ ವೇಳೆ ಅಧಿಕಾರಿಗಳ ಕಚೇರಿಗಳಲ್ಲಿ ಹಾಜರಿದ್ದ ಸಿಬ್ಬಂದಿಯನ್ನು ವಿಚಾರಣೆಗೊಳಪಡಿಸಲಾಗಿದ್ದು, ಕಡತಗಳನ್ನು ಪರಿಶೀಲನೆ ನಡೆಸುತ್ತಿದ್ದಾರೆ ಎನ್ನಲಾಗಿದೆ. ಲೋಕಾಯುಕ್ತ ದಾಳಿಯಿಂದಾಗಿ ಮಿನಿ ವಿಧಾನಸೌಧದಲ್ಲಿ ಕೆಲಕಾಲ ಅಧಿಕೃತ ಕೆಲಸಗಳು ಸ್ಥಗಿತಗೊಂಡು, ಸಾರ್ವಜನಿಕರಲ್ಲಿ ಆತಂಕ ಮೂಡಿತು. ಕಚೇರಿಯಲ್ಲಿ ಕಡತಗಳ ಪರಿಶೀಲನೆ ಇನ್ನು ಮುಂದುವರಿದಿದೆ.

# ಭೀಮಾ ಕೊರೆಗಾಂವ್ 208ನೇ ವಿಜಯೋತ್ಸವ ನಗರದಾದ್ಯಂತ ಜೈಭೀಮ್ ಘೋಷಣೆಗಳ ನಡುವೆ ಭವ್ಯ ಪಥಸಂಚಲನ

❑ ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ಜನವರಿ 01: ಭೀಮಾ ಕೊರೆಗಾಂವ್ 208ನೇ ವಿಜಯೋತ್ಸವದ ಅಂಗವಾಗಿ, ಭೀಮಾ ಕೊರೆಗಾಂವ್ ಯುದ್ಧ ವಿಜಯೋತ್ಸವ ಆಚರಣಾ ಸಮಿತಿ ವತಿಯಿಂದ ಗುರುವಾರ ನಗರದ ಹೃದಯಭಾಗದಲ್ಲಿ ಜೈಬೀಮ್ ರೆಜಿಮೆಂಟ್ ವತಿಯಿಂದ ಭವ್ಯ ಪಥಸಂಚಲನ ಜರುಗಿತು. ನೂರಾರು ಕಾರ್ಯಕರ್ತರು, ಯುವಕರು ಹಾಗೂ ಸಂಘಟನೆಗಳ ಪದಾಧಿಕಾರಿಗಳು ಪಥಸಂಚಲನದಲ್ಲಿ ಭಾಗವಹಿಸಿ ಬೃಹತ್ ಏಕತೆಯ ನೋಟ ಮೂಡಿಸಿದರು.**




ಪಥಸಂಚಲನವು ತಾಲೂಕು ಪಂಚಾಯಿತಿ ಆವರಣದಲ್ಲಿರುವ ಡಾ. ಬಿ.ಆರ್. ಅಂಬೇಡ್ಕರ್ ಪುತ್ಥಳಿಯಿಂದ ಪ್ರಾರಂಭವಾಗಿ, ಗಾಂಧಿ ಸರ್ಕಲ್, ಕನಕದಾಸ ಸರ್ಕಲ್, ಕಿತ್ತೂರು ರಾಣಿ ಚನ್ನಮ್ಮ ಸರ್ಕಲ್, ಯಲ್ಲಮ್ಮ ಗುಡಿ ಮುಂಭಾಗದ ಮುಖ್ಯರಸ್ತೆ ಮಾರ್ಗವಾಗಿ ಪಿಡಬ್ಲ್ಯುಡಿ ಕ್ಯಾಂಪ್‌ನ ಅಂಬೇಡ್ಕರ್ ವೃತ್ತದವರೆಗೆ ಸಾಗಿತು. ಜೈಭೀಮ್ ರೆಜಿಮೆಂಟ್‌ನ ಯುವಕರು ನೀಲಿ ಧ್ವಜಗಳನ್ನು ಲೇವಡಿ, "ಜೈಭೀಮ್ ? ಜೈ ಸಂವಿಧಾನ", "ಅಂಬೇಡ್ಕರ್ ಅಮರರಾಗಲಿ", "ಭೀಮಾ ಕೊರೆಗಾಂವ್ ವಿಜಯೋತ್ಸವ ಚಿರಂಜೀವಿ" "ಜೈಭೀಮ್" ಘೋಷಣೆಗಳಿಂದ ನಗರವು ಒಂದು ಕ್ಷಣ ಅಂಬೇಡ್ಕರ್ ಚಿಂತನೆಯೊಂದಿಗೆ ಕಂಗೊಳಿಸಿದಂತೆ ಕಾಣಿಸಿತು. ಕಾರ್ಯಕರ್ತರು ಭೀಮಾ ಕೊರೆಗಾಂವ್ ಯುದ್ಧದ ಪರಂಪರೆ, ಸಮಾನತೆ ಮತ್ತು ಸಾಮಾಜಿಕ ನ್ಯಾಯದ ಮೌಲ್ಯಗಳನ್ನು ಸಾರುವ ಘೋಷಣೆಗಳನ್ನು ಕೂಗಿ ಜನರಲ್ಲಿ ಒಗ್ಗಟ್ಟಿನ ಸಂದೇಶ ಹರಿಸಿದರು. ಪಥಸಂಚಲನದಲ್ಲಿ ಸಮಾಜಸೇವಕರು, ಯುವಕ ಸಂಘಗಳು ಮತ್ತು ವಿವಿಧ ಅಂಬೇಡ್ಕರೈಟ್ ಸಂಘಟನೆಗಳ ಸದಸ್ಯರು ದೊಡ್ಡ ಸಂಖ್ಯೆಯಲ್ಲಿ ಪಾಲ್ಗೊಂಡಿದ್ದರು. ಪಥಸಂಚಲನ ಶಿಸ್ತಿನ ಮಾದರಿಯಾಗಿ ಮೆಚ್ಚುಗೆ, ಪಥಸಂಚಲನವು ಸಂಪೂರ್ಣ ಶಾಂತಿಯುತವಾಗಿ ನಡೆದಿದ್ದು, ಯಾವುದೇ ರೀತಿಯ ಗೊಂದಲ, ಟ್ರಾಫಿಕ್ ಅಡಚಣೆ, ಸಾರ್ವಜನಿಕ ಅಸಮಾಧಾನ ಉಂಟಾಗದಂತೆ ಸಂಘಟಕರು ಪರಿಪೂರ್ಣ ವ್ಯವಸ್ಥೆ ಮಾಡಿದ್ದರು.

ಪೊಲೀಸ್ ಮತ್ತು ಸ್ವಯಂಸೇವಕರ ಸಹಕಾರದಿಂದ ಮೆರವಣಿಗೆ ಸುಗಮವಾಗಿ ಪೂರ್ಣಗೊಂಡಿತು. ಎಲ್ಲರೂ ಪಥಸಂಚಲನಕ್ಕೆ ಮುನ್ನಡೆ ನೀಡಿದರು. ವಿಜಯೋತ್ಸವದ ಸಾರ ಸಮಾನತೆ ಮತ್ತು ನ್ಯಾಯ ಮುಖಂಡರು ಮಾತನಾಡಿ, ಭೀಮಾ ಕೊರೆಗಾಂವ್ ಯುದ್ಧವು ಶೋಷಿತರ ಹೋರಾಟ, ಸ್ವಾಭಿಮಾನ,ಅಸಮಾನತೆಗೆ ವಿರುದ್ಧದ ಸಶಕ್ತ ಸಂದೇಶ ಎಂಬುದಾಗಿ ವಿವರಿಸಿ, ಅಂಬೇಡ್ಕರ್ ಅವರ ಸಂವಿಧಾನವು ಸಮಾನತೆ ಮತ್ತು ಸ್ವಾತಂತ್ರ್ಯದ ಮೂಲ,ಯುವಕರಲ್ಲಿ ಸಾಮಾಜಿಕ ನ್ಯಾಯ, ಸಮಾನತೆ ಮತ್ತು ಏಕತೆಯ ಮೌಲ್ಯ ಬೆಳೆಸುವುದು ವಿಜಯೋತ್ಸವದ ಗುರಿ ಎಂದು ವಿವರಿಸಿದರು.

ದೇಶದ ಪ್ರಜಾಸತ್ತಾತ್ಮಕ ಮೌಲ್ಯಗಳನ್ನು ಕಾಪಾಡಲು ಯುವಕರನ್ನು ಪ್ರೇರೇಪಿಸಿದರು. ಸಿಂಧನೂರು ನಗರದಲ್ಲಿ ನಡೆದ ಈ ಪಥಸಂಚಲನವು ಶಾಂತಿ, ಸಂಘಟಿತ ಶಕ್ತಿ,ಅಂಬೇಡ್ಕರ್ ತತ್ವಪ್ರೇಮ, ಭೀಮಾ ಕೊರೆಗಾಂವ್ ಪರಂಪರೆಯ ಗೌರವ ಎಂಬ ಸಂದೇಶವನ್ನು ಸಮಾಜಕ್ಕೆ ಸಾರುವಲ್ಲಿ ಯಶಸ್ವಿಯಾಯಿತು. ನಗರದ ನಾಗರಿಕರು ಹಾಗೂ ಸಂಘಟನೆಗಳ ಸಕ್ರಿಯ ಪಾಲ್ಗೊಳ್ಳಿಕೆಯಿಂದ 208ನೇ ವಿಜಯೋತ್ಸವದ ಆಚರಣೆಗೆ ಐತಿಹಾಸಿಕ ಮೆರಗು ದೊರೆಯಿತು. ಈ ಪಥ ಸಂಚಲನದಲ್ಲಿ ಮುಖ್ಯವಾಗಿ ಸಾರ್ವಜನಿಕರಿಂದ ಮುನ್ನಡೆಸಲ್ಪಟ್ಟ ಪಥಸಂಚಲನಕ್ಕೆ ಎಂ. ಗಂಗಾಧರ, ಎಂ. ಮರಿಯಪ್ಪ, ಅಮರೇಶ ಗಿರಿಜಾಲಿ, ಬೀಮ್ ಆರ್ಮಿ ಅಧ್ಯಕ್ಷ ಪ್ರವೀಣ್ ದುಮತಿ, ಮೌನೇಶ ಜಾಲವಾಡಗಿ, ಹುಸೇನಪ್ಪ, ಅಮರೇಶ್, ಸೇರಿದಂತೆ ಅನೇಕ ನಾಯಕರು ಹಾಗೂ ಸಂಘಟನಾ ಪದಾಧಿಕಾರಿಗಳು ಸಾನ್ನಿಧ್ಯ ವಹಿಸಿದ್ದರು. ಪಥಸಂಚಲನಕ್ಕೆ ನೂರಾರು ಯುವಕರು, ಮಹಿಳಾ ಕಾರ್ಯಕರ್ತರು, ವಿದ್ಯಾರ್ಥಿಗಳು, ವಿವಿಧ ಸಂಘಟನೆಗಳ ಸದಸ್ಯರು ಶಿಸ್ತಿನ ಸಾಲುಗಳಲ್ಲಿ ನಿಂತು ಭಾಗವಹಿಸಿದರು. ಎಲ್ಲರೂ ನೀಲಿ ಶಾಲು, ನೀಲಿ ಧ್ವಜ, ಅಂಬೇಡ್ಕರ್ ಫೋಟೋಗಳು ಮತ್ತು ಭೀಮಾ ಕೊರೆಗಾಂವ್ ಚಿಹ್ನೆಗಳನ್ನು ತೊಟ್ಟು ಸಂಭ್ರಮಿಸಿದರು.

## ಶಿಕ್ಷಣ ಮಾರ್ಗದರ್ಶಿ ವಿಶೇಷ

### ಡಿ ಫಾರ್ಮಸಿ

ಆರೋಗ್ಯ ಹಾಗೂ ಔಷಧೀಯ ಕ್ಷೇತ್ರಗಳು ಜಗತ್ತಿನಾದ್ಯಂತ ವೇಗವಾಗಿ ಬೆಳೆಯುತ್ತಿದ್ದು, ಪರಿಣತ ಫಾರ್ಮಸಿ ವೃತ್ತಿಪರರ ಬೇಡಿಕೆಯನ್ನು ಹೆಚ್ಚಿಸುತ್ತವೆ. ಆರೋಗ್ಯ, ಔಷಧಿ ಮತ್ತು ರೋಗಿ ಕಲ್ಯಾಣದ ಬಗ್ಗೆ ಆಸಕ್ತಿ ಇರುವ ವಿದ್ಯಾರ್ಥಿಗಳಿಗೆ ಆ. Pharmacy ಕಾರ್ಯಕ್ರಮವು ಅತ್ಯುತ್ತಮ ಆರಂಭವಾಗಿದೆ. ಇದು ಅಲ್ಪಾವಧಿಯ ಕೋರ್ಸ್ ಆಗಿದ್ದು, ಔಷಧಿ ಕ್ಷೇತ್ರದಲ್ಲಿ ಕ-ರಿಯರ್ ಬೆಳೆಸುವ ಆಸಕ್ತಿ ಇರುವ ವಿದ್ಯಾರ್ಥಿಗಳಿಗೆ ಸೂಕ್ತ. ಈ ಕೋರ್ಸ್ ಮೂಲಕ ಹೆಚ್ಚಿನ ಅಧ್ಯಯನ ಅಥವಾ ಔಷಧೀಯ ಉದ್ಯಮದಲ್ಲಿ ಕೆಲಸ ಮಾಡುವ ಹಲವು ಅವಕಾಶಗಳು ಲಭ್ಯ. ಸಿದ್ಧಾಂತ ಮತ್ತು practically hands-on ಅನುಭವದ ಸಮನ್ವಯದಿಂದ ಕೌಶಲ್ಯಾಭಿವೃದ್ಧಿಗೆ ಒತ್ತು ನೀಡಲಾಗುತ್ತದೆ ಆ Pharm ಕೋರ್ಸ್ ಅವಧಿ ಎರಡು ವರ್ಷಗಳು, ನಾಲ್ಕು ಸೆಮಿಸ್ಟರ್‌ಗಳಾಗಿ ವಿಭಜಿಸಲ್ಪಟ್ಟಿದೆ. ಇಲ್ಲಿ ಔಷಧೀಯ ವಿಜ್ಞಾನ, ಔಷಧ ತಯಾರಿಕೆ, ಔಷಧ ವಿತರಣೆ ಹಾಗೂ ಸಂಬಂಧಿತ ವಿಷಯಗಳಿಗೆ ಒತ್ತು ನೀಡಲಾಗುತ್ತದೆ. ಕೋರ್ಸ್‌ನಲ್ಲಿ ಸಾಮಾನ್ಯವಾಗಿ ಒಳಗೊಂಡಿರುವ ವಿಷಯಗಳು: ಫಾರ್ಮಸ್ಯೂಟಿಕಲ್ ಕೆಮಿಸ್ಟ್ರಿ ಫಾರ್ಮಸ್ಯೂಟಿಕಲ್ ಬೈಯಾಲಜಿ ಫಾರ್ಮಕಾಲಜಿ ಮತ್ತು ಟಾಕ್ಸಿಕಾಲ ಫಿಸಿಯಾಲಜಿ ಫಾರ್ಮಾಸ್ಯೂಟಿಕ್ಸ್ ಫಾರ್ಮಕೊಗ್ನೋಸಿ ಡ್ರಗ್ ಸ್ಟೋರ್ ಮತ್ತು ಬಿಸಿನೆಸ್ ಮ್ಯಾನೇಜ್‌ಮೆಂಟ್ ಬಯೋಕೆಮಿಸ್ಟ್ರಿ ಮತ್ತು ಕ್ಲಿನಿಕಲ್ ಪಥಾಲಜಿ ಹೆಲ್ತ್ ಎಜುಕೇಷನ್ ಮತ್ತು ಕಮ್ಯುನಿಟಿ ಫಾರ್ಮಸಿ ಮತ್ತು ಇತರೆ ಹಲವು ವಿಗಳು ಈ ಡಿಪ್ಲೋಮಾ ಕೋರ್ಸ್ 12ನೇ ತರಗತಿ ನಂತರ ಔಷಧೀಯ ಕ್ಷೇತ್ರಕ್ಕೆ ಪ್ರವೇಶಿಸುವ ಸುವರ್ಣಾವಕಾಶ. ಈ ಕೋರ್ಸ್ ನಂತರ ಔಷಧಾಲಯ (Medical Store) ತೆರೆಯಲು, ಫಾರ್ಮಸಿಸ್ಟ್ ಆಗಲು, ಡ್ರಗ್ ಇನ್ಸ್‌ಪೆಕ್ಟರ್ ಆಗಲು ಸಾಧ್ಯ. ಖಾಸಗಿ ಕ್ಲಿನಿಕ್‌ಗಳು, ಆಹಾರ ಮತ್ತು ಔಷಧ ಇಲಾಖೆ, ಸರ್ಕಾರಿ ಆಸ್ಪತ್ರೆಗಳು, ಔಷಧ ಕಂಪನಿಗಳು, ಶಿಕ್ಷಣ ಮುಂತಾದ ಕ್ಷೇತ್ರಗಳಲ್ಲಿ ಉದ್ಯೋಗಾವಕಾಶವಿದೆ. ಆ. Pharmacy ಮಾಡುವುದು ನೀಡುವ ಲಾಭಗಳು ಆ ಕುಚಿಡಿಟ ಕೋರ್ಸ್‌ನ್ನು ಆರಿಸುವುದರಿಂದ ಅನೇಕ ಪ್ರಯೋಜನಗಳಿವೆ: ಅಲ್ಪಾವಧಿ ಕೋರ್ಸ್ ಆ ಕುಚಿಡಿಟ ಕೇವಲ 2 ವರ್ಷಗಳ ಕೋರ್ಸ್; ನಾಲ್ಕು ವರ್ಷಗಳ ಪದವಿಯಿಗಿಂತ ಬೇಗನೇ ಉದ್ಯೋಗಕ್ಕೆ ಸೇರುವ ಅವಕಾಶ. ಮೂಲಭೂತ ಔಷಧೀಯ ಜ್ಞಾನ ಔಷಧ ತಯಾ-ರಿಕೆ, ಔಷಧ ಪ್ರಭಾವ, formulation, pharmacology ಮೊದಲಾದ ಅನೇಕ ವಿಷಯಗಳ ಪ್ರಾಥಮಿಕ ತಳಹದಿಯನ್ನು ನೀಡುತ್ತದೆ. ಉತ್ತಮ ಉದ್ಯೋಗಾವಕಾಶಗಳು ರಿಟೇಲ್ ಫಾರ್ಮಸಿ, ಆಸ್ಪತ್ರೆ, ಔಷಧ ಉತ್ಪಾದನಾ ಘಟಕಗಳು, ಕ್ವಾಲಿಟಿ ಕಂಟ್ರೋಲ್, ಔಷಧ ವಿತರಣೆ ಮುಂತಾದ ಕಾರ್ಯಗಳಿಗೆ ಉತ್ತಮ ಅವಕಾಶ. ಕಡಿಮೆ ವೆಚ್ಚಕೋರ್ಸ್ ಅವಧಿ ಕಡಿಮೆ ಇರುವುದರಿಂದ ಶುಲ್ಕ ಮತ್ತು ವಸತಿಸೌಕರ್ಯಗಳ ವೆಚ್ಚವೂ ಕಡಿಮೆ.ಹಸ್ತಪ್ರಯೋಗ (Practical) ತರಬೇತಲ್ಯಾಬ್‌ಗಳಲ್ಲಿ ಕಾರ್ಯನಿರ್ವಹಣೆ, ಔಷಧ ತಯಾರಿಕೆ, ಡ್ರಗ್ ಡಿಸ್ಪೆನ್ಸಿಂಗ್, ಗುಣಮಟ್ಟ ನಿಯಂತ್ರಣ ಮುಂತಾದ practically ಅನುಭವ. ಮುಂದಿನ ಶಿಕ್ಷಣಕ್ಕೆ ಅವಕಾಶÀ B. Pharmacy, M. Pharmacy ಅಥವಾ ಇತರೆ ವಿಶಿಷ್ಟ ಕೋರ್ಸ್‌ಗಳಿಗೆ ಬೆಳವಣಿಗೆ ಅವಕಾಶ. ವೈವಿಧ್ಯಮಯ ಕರಿಯರ್ ಕ್ಷೇತ್ರಗಳು ರಿಟೇಲ್/ಹಾಸ್ಪಿಟಲ್ ಫಾರ್ಮಸಿ, ಫಾರ್ಮಾ ಕಂಪನಿಗಳು, ಕ್ಲಿನಿಕಲ್ ರಿಸರ್ಚ್, ಸರ್ಕಾರದ ಆರೋಗ್ಯ ಇಲಾಖೆ ಮುಂತಾದವಗಳಲ್ಲಿ ಕೆಲಸ ಮಾಡಬಹುದು. ಲವಚಿಕತೆ (Flexibility) Medical writing, Regulatory affairs, Healthcare administration ಮುಂತಾದ ವಿವಿಧ ಕ್ಷೇತ್ರಗಳಲ್ಲಿ ಸೌಕರ್ಯವಾಗಿ ಕೆಲಸ ಮಾಡಬಹುದಾದ ಕೌಶಲ್ಯ. ಫಾರ್ಮಸಿ ವೃತ್ತಿಪರರಿಗೆ ಹೆಚ್ಚುತ್ತಿರುವ ಬೇಡಿಕೆ ಔಷಧ ನಿರ್ವಹಣೆ, ರೋಗಿ ಆರೈಕೆ ಕ್ಷೇತ್ರಗಳಲ್ಲಿ ಪರಿಣತ ಫಾರ್ಮಸಿಸ್ಟ್‌ಗಳ ಅಗತ್ಯ ನಿರಂತರವಾಗಿ ಹೆಚ್ಚುತ್ತಿದೆ.ಆ Pharma ಅರ್ಹತೆ (Eligibility) D Pharm ಕೋರ್ಸ್‌ಗೆ ಪ್ರವೇಶ ಪಡೆಯಲು: 10+2 (ಸೈನ್ಸ್ ಸ್ಟ್ರೀಮ್) ನಲ್ಲಿ ಕನಿಷ್ಠ 50% ಅಂಕಗಳೊಂದಿಗೆ ಉತ್ತೀರ್ಣರಾಗಿರಬೇಕು. ಕರ್ನಾಟಕದಲ್ಲಿ ಡಿ ಫಾರ್ಮಸಿ ಒಂದೇ ಸರ್ಕಾರಿ ಕಾಲೇಜಿಗೆ 470 ಖಾಸಗಿ ಕಾಲೇಜುಗಳು, ಕರ್ನಾಟಕದಲ್ಲಿವೆ.

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.

# ಸೈಬರ್ ಅಪರಾಧಗಳ ಜಾಗೃತಿಗೆ ರಾಯಚೂರು ಜಿಲ್ಲೆಯಲ್ಲಿ ಹೊಸ ವಿಧಾನ

ನೈಜ್ಯ ದೆಸೆ ನ್ಯೂಸ್

**ರಾಯಚೂರು: ಜಿಲ್ಲೆಯಲ್ಲಿ ಹೆಚ್ಚುತ್ತಿರುವ ಸೈಬರ್ ಅಪರಾಧಗಳನ್ನು ಗಂಭೀರವಾಗಿ ಪರಿಗಣಿಸಿರುವ ಸೈಬರ್ ಅಪರಾಧ ಠಾಣೆಯ ಪೊಲೀಸರು ಜನ ಜಾಗೃತಿಗೆ ಹೊಸ ಹೊಸ ವಿಧಾನಗಳನ್ನು ಅನುಸ-ರಿಸಲು ಶುರು ಮಾಡಿದ್ದಾರೆ. ಗೌತಮ ಬುದ್ಧನ ಸಂದೇಶಗಳನ್ನೂ ಬಳಸಿಕೊಳ್ಳಲು ಆರಂಭಿಸಿದ್ದಾರೆ. ಸೈಬರ್ ಠಾಣೆಗೆ ಹೊಸ ರೂಪ ನೀಡಿ, ಠಾಣೆಯ ಆವರಣ ಗೋಡೆಗಳ ಮೇಲೆ ಭಿತ್ತಿಚಿತ್ರಗಳನ್ನು ಬರೆಸುವ ಮೂಲಕ ಜನರಿಗೆ ಎಲ್ಲ ಬಗೆಯ ಮಾಹಿತಿ ಕೊಡಲು ಪ್ರಯತ್ನಿಸುತ್ತಿದ್ದಾರೆ.**

ಗೌತಮ ಬುದ್ಧ ಬೋಧನೆ ಮಾಡಿದ 'ಆಸೆಯೇ ದುಖಃಕ್ಕೆ ಮೂಲ' ಸಂದೇಶವನ್ನು ಪ್ರಧಾನವಾಗಿಟ್ಟುಕೊಂಡು ಜಾಗೃತಿ ಮೂಡಿಸುತ್ತಿದ್ದಾರೆ. ಬುದ್ಧನ ಭಾವಚಿತ್ರವನ್ನೂ ಬಿಡಿಸಿದ್ದಾರೆ. ಡಿಜಿಟಲ್ ಅರೆಸ್ಟ್, ಒಟಿಪಿ ವಂಚನೆ, ಅಶ್ಲೀಲ ಚಿತ್ರಗಳ ವೀಕ್ಷಣೆಯೂ ಅಪರಾಧ ಎನ್ನುವುದನ್ನು ಗೋಡೆಗಳ ಮೇಲೆ ಚಿತ್ರಬರಹದ ಮೂಲಕ ತಿಳಿವಳಿಕೆ ನೀಡಲು ಪ್ರಯತ್ನಿಸುತ್ತಿದ್ದಾರೆ.




ಅಷ್ಟೇ ಅಲ್ಲ ಸಹಾಯವಾಣಿ ಸಂಖ್ಯೆಯನ್ನೂ ಬರೆದಿದ್ದಾರೆ. ತಿಳಿದೋ, ತಿಳಿಯದೆಯೋ ಹಣ ಕಳೆದುಕೊಂಡವರಿಗೆ ಮೊದಲ ಹಂತದಲ್ಲಿ ಸಾಂತ್ವನ ಹೇಳಿ ಅವರಿಗೆ ಸಾಧ್ಯವಿರಷ್ಟರ ಮಟ್ಟಿಗೆ ನೆರವಾಗಲು ಪ್ರಯತ್ನಿಸುತ್ತಿದ್ದಾರೆ.

ಸೈಬರ್ ಅಪರಾಧಗಳನ್ನು ತಡೆಯಲು ಪೊಲೀಸರು ಸಾಮಾಜಿಕ ಜಾಲತಾಣಗಳ ಹೆಚ್ಚು ಹೆಚ್ಚು ಬಳಸಿಕೊಳ್ಳುತ್ತಿದ್ದಾರೆ. ಸೈಬರ್ ಅಪರಾಧಗಳ ಬಗ್ಗೆ ಮಾಹಿತಿ ನೀಡುವ ಆಪ್‌ಗಳು ಮತ್ತು ಪೋರ್ಟಲ್‌ಗಳಂತಹ ಹೊಸ ವಿಧಾನಗಳನ್ನು ಬಳಸುತ್ತಿದ್ದಾರೆ. ಶಾಲಾ ಕಾಲೇಜುಗಳಲ್ಲಿ ಜನಸ್ನೇಹಿ ಕಾರ್ಯಕ್ರಮಗಳ ಮೂಲಕ ಜನರಲ್ಲಿ ಜಾಗೃತಿ ಮೂಡಿಸುತ್ತಿದ್ದಾರೆ. 'ಸೈಬರ್ ಪೊಲೀಸರು ಸಾಮಾಜಿ-ಕ ಜಾಲತಾಣಗಳು, ಮತ್ತು ಸಾರ್ವಜನಿಕ ಸ್ಥಳಗಳಲ್ಲಿ ಡಿಜಿಟಲ್ ಪ್ರದರ್ಶನಗಳ ಮೂಲಕ ಸೈಬರ್ ಸುರಕ್ಷತೆಯ ಬಗ್ಗೆ ಅರಿವು ಮೂಡಿಸುತ್ತಿದ್ದಾರೆ. ಆನ್‌ಲೈನ್ ಸೈಬರ್ ದೂರುಗಳನ್ನು ದಾಖಲಿಸಲು ಮತ್ತು ಹಣಕಾಸು ವಂಚನೆಯನ್ನು ತಡೆಯಲು ಈ ಟೋಲ್-ಫ್ರೀ ನಂಬರ್ 1930 ಅನ್ನು ಬಳಸಲಾಗುತ್ತಿದೆ.

ಸೈಬರ್ ಸುರಕ್ಷತೆ ಮತ್ತು ಭದ್ರತೆಗಾಗಿ ಜನರನ್ನು ಜಾಗೃತಗೊಳಿಸಲು ಸಂಚಾರ, ಸಾಥಿ ಪೋರ್ಟಲ್ ಹಾಗೂ ಆಯಪ್ ಸಹಾಯ ಪಡೆಯಲಾಗುತ್ತಿದೆ' ಎಂದು ಸೈಬರ್ ಠಾಣೆಯ ಡಿವೈಎಸ್‌ಪಿ ವೆಂಕಟೇಶ ಹೊಗಿಬಂಡಿ ಹೇಳುತ್ತಾರೆ. 'ಸೈಬರ್ ಅಪರಾಧ ತಡೆಯಲು ಹೊಸ ತಂತ್ರಜ್ಞಾನಗಳನ್ನು ಅಳವಡಿಸಿ ಸುಳ್ಳು ಸುದ್ದಿ ಹರಡುವ ಜಾಲತಾಣಗಳ ಮೇಲೆ ಕ್ರಮ ಕೈಗೊಳ್ಳುತ್ತಿದ್ದಾರೆ. ಸಾರ್ವಜನಿಕರು ಸೈಬರ್ ಅಪರಾಧಗಳನ್ನು ವರದಿ ಮಾಡಲು ಮತ್ತು ಮಹಿಳೆಯರು ಮತ್ತು ಮಕ್ಕಳ ಮೇಲಿನ ಅಪರಾಧಗಳಿಗೆ ಶೀಘ್ರವಾಗಿ ಕ್ರಮ ಕೈಗೊಳ್ಳಲು ರಾಷ್ಟ್ರೀಯ ಸೈಬರ್ ಅಪರಧಾ ವರದಿ ಪೋರ್ಟಲ್ ಸಹಕಾರಿಯಾಗಿದೆ' ಎನ್ನುತ್ತಾರೆ.

# ಸಿಸಿ ರಸ್ತೆ ಕಾಮಗಾರಿಗೆ ಸಿದ್ದಲಿಂಗಶ್ರೀಗಳಿಂದ ಚಾಲನೆ



ನೈಜ್ಯ ದೆಸೆ ನ್ಯೂಸ್

**ತಾಳಿಕೋಟೆ: ಪಟ್ಟಣದ ಶ್ರೀ ಖಾಸ್ಗತೇಶ್ವರ ಮಠದ ಮುಂಭಾಗದ ತೇರಿನ ಮನೆಯಿಂದ ಜಾಮೀಯಾ ಮಸೀದಿವರೆಗಿನ ಸಿಸಿ ರಸ್ತೆ ನಿರ್ಮಾಣ ಕಾಮಗಾರಿಗೆ ಶ್ರೀ ಖಾಸ್ಗತೇಶ್ವರ ಮಠದ ಬಾಲಶಿವಯೋಗಿ ಶ್ರೀ ಸಿದ್ದಲಿಂಗ ದೇವರು ಶುಕ್ರವಾರರಂದು ಚಾಲನೆ ನೀಡಿದರು.**

ಈ ಸಮಯದಲ್ಲಿ ಮಾತನಾಡಿದ ಸಿದ್ದಲಿಂಗಶ್ರೀಗಳು ಶ್ರೀ ಖಾಸ್ಗತೇಶ್ವರ ಮಠದ ನಿತ್ಯ ಸಾವಿರಾರು ಭಕ್ತರು ಆಗಮಿಸುತ್ತಿರುವದರಿಂದ ಮತ್ತು ಪ್ರತಿವರ್ಷ ಶ್ರೀಮಠದ ಅದ್ದೂರಿ ರಥೋತ್ಸವ ಲಕ್ಷಾಂತರ ಭಕ್ತರ ಮಧ್ಯ ಜರುಗುತ್ತಾ ಸಾಗಿದ್ದ-ರಿಂದ ಶ್ರೀಮಠದ ಮುಂದೆ ಉತ್ತಮ ಸಿಸಿ ರಸ್ತೆಯ ಅವಶ್ಯಕತೆ ಇತ್ತು ಈ ನಿಟ್ಟನಲ್ಲಿ ನಗರೋತ್ತಾನ ಯೋಜನೆಯಡಿ ಗುತ್ತಿಗೆದಾರರಾದ ವಿಶ್ವನಾಥ-'ರೆಡ್ಡಿ ನಾಡಗೌಡ ಅವರೂ ಕೂಡಾ ಶ್ರೀಮಠದ ಭಕ್ತರಾಗಿದ್ದಾರೆ ಅವರು ಸಿಸಿ ರಸ್ತೆ ಕಾಮಗಾರಿ ನಿರ್ವಹಣೆಗೆ ಮುಂದಾಗಿದ್ದು ಉತ್ತಮವಾದ ರಸ್ತೆ ನಿರ್ಮಾಣದ ಜೊತೆಗೆ ಭಕ್ತಾಧಿಗಳಿಗೆ ಮತ್ತು ರಥ-'ೋತ್ಸವಕ್ಕೆ ಅನೂಕೂಲ ರೀತಿಯಲ್ಲಿ ರಸ್ತೆ ನಿರ್ಮಾಣ ಮಾಡಲು ಮನವಿ ಮಾಡಲಾಗಿದೆ ಇದಕ್ಕೆ ಅವರೂ ಕೂಡಾ ಹೆಚ್ಚಿನ ರೀತಿಯಲ್ಲಿ ಮುತುವರ್ಜಿ ವಹಿಸಿ ಬಹು ಬಾಳ್ವಿಕೆ ಬರುವ ರೀತಿಯಲ್ಲಿ ಉತ್ತಮ ರಸ್ತೆ ನಿರ್ಮಾಣ ಮಾಡಿಕೊಡುವದಾಗಿ ತಿಳಿಸಿದ್ದಾರೆ ಶ್ರೀ ಖಾಸ್ಗತರ ಹಾಗೂ ವಿರಕ್ತಶ್ರೀಗಳ ಆಶೀರ್ವಾದ ಅವರ ಮೇಲಿರಲಿ ಎಂದು ಆಶಿಸಿದರು.

ಇದೇ ಸಮಯದಲ್ಲಿ ಗುತ್ತಿಗೆದಾರರಾದ ವಿಶ್ವನಾಥರೆಡ್ಡಿ ನಾಡಗೌಡ ಅವರು ಶ್ರೀಮಠದ ಬಾಲಶಿವಯೋಗಿ ಶ್ರೀ ಸಿದ್ದಲಿಂಗ ದೇವರನ್ನು ಸನ್ಮಾನಿಸಿ ಗೌರವಿಸಿದರು. ಈ ಸಮಯದಲ್ಲಿ ಶ್ರೀ ಖಾಸ್ಗತೇಶ್ವರ ಮಠದ ಉಸ್ತುವಾರಿ ವೇ.ಮುರುಘೇಶ ವಿರಕ್ತಮಠ, ಗುತ್ತಿಗೆದಾರ ವಿಶ್ವನಾಥರೆಡ್ಡಿ ನಾಡಗೌಡ(ಶೆಳ್ಳಗಿ), ಅಶೋಕಗೌಡ ಬಿರಾದಾರ, ಬಸನಗೌಡ ಬಿರಾದಾರ, ಜಿಲಾನಿ ಖಾಜಿ(ಶೆಳ್ಳಗಿ), ಜೈಸಿಂಗ್ ಮೂಲಿಮನಿ, ಮೊದಲಾದವರು ಉಪಸ್ಥಿತರಿದ್ದರು.


# ಗವಿಮಠ ತೆಪ್ಪೋತ್ಸವ, ಗಂಗಾರತಿ ಕಣ್ತುಂಬಿಕೊಂಡ ಭಕ್ತರು

ನೈಜ್ಯ ದೆಸೆ ನ್ಯೂಸ್

**ಕೊಪ್ಪಳ: ಗವಿಮಠದ ಜಾತ್ರಾ ಮಹೋತ್ಸವ ಅಂಗವಾಗಿ ಮಠ ಹಾಗೂ ಸುತ್ತಮುತ್ತಲಿನ ಪ್ರದೇಶವನ್ನು ವಿವಿಧ ಬಣ್ಣಗಳ ವಿದ್ಯುತ್ ದೀಪಗಳಿಂದ ಮಾಡಲಾಗಿದೆ. ಹೊಸ ವರ್ಷದ ಮೊದಲ ದಿನವಾದ ಗುರುವಾರ ಜಾತ್ರೆಯ ಕಾರ್ಯಕ್ರಮಗಳಿಗೆ ವಿದ್ಯುಕ್ತ ಚಾಲನೆ ಲಭಿಸಿತು.**

ಗವಿಮಠದ ಕೆರೆಯಲ್ಲಿ ಶಾಸ್ತ್ರೋಕ್ತವಾಗಿ ನಡೆದ ತೆಪ್ಪೋತ್ಸವ ಹಾಗೂ ಗಂಗಾರತಿ ವೈಭವವನ್ನು ಸಾವಿರಾರು ಭಕ್ತರು ಕಣ್ತುಂಬಿಕೊಂಡರು. ಗಾಯಕಿ ಬೀದರ್‌ನ ಶಿವಾನಿ ಶಿವದಾಸಸ್ವಾಮಿ ಹಾಗೂ ತಂಡದ ಕಲಾವಿದರಿಂದ ಸಂಗೀತ ಕಾರ್ಯಕ್ರಮ ನೀಡಿದ್ದು ಜನರನ್ನು ಸಂಗೀತದ ಅಲೆಯಲ್ಲಿ ತೇಲಾಡುವಂತೆ ಮಾಡಿತು. ಕೊಪ್ಪಳದ ಉದ್ಯಮಿ ಬಸವರಾಜ ಮಲ್ಲಿಕಾರ್ಜುನ ಮಾಳಗಿ ಅವರು ಸಂಕಲ್ಪಪೂಜೆ ನೆರವೇರಿಸುವ ಮೂಲಕ ತೆಪ್ಪೋತ್ಸವಕ್ಕೆ ಚಾಲನೆ ನೀಡಿದರು. ಹುಬ್ಳಿಯ ಶಿವಾಜ್ ಹಾಗೂ ತಂಡದವ-ರಿಂದ ಗಂಗಾರತಿ ಕಾರ್ಯಕ್ರಮ ನಡೆಸಿಕೊಟ್ಟರು.





ತೆಪ್ಪ ಗವಿಮಠದ ಕೆರೆಯಲ್ಲಿ ಪ್ರದಕ್ಷಿಣೆ ಹಾಕುತ್ತಿದ್ದರೆ ಗವಿಸಿದ್ಧೇಶ್ವರ ಸಂಗೀತ ವಿದ್ಯಾಪೀಠದ ವಿದ್ಯಾರ್ಥಿಗಳಿಂದ ಗವಿಸಿದ್ಧೇಶಗೆ ನಮೋ ನಮೋ, ಗವಿಸಿದ್ಧೇಶರರ ಸುಪ್ರಭಾತ ಹಾಗೂ ಭಕ್ತಿಗೀತೆಗಳು ಮೊಳಗಿದವು. ಗವಿಸಿದ್ಧೇಶರರನ್ನು ಸಂಕಲ್ಪ ಮಾಡಿಕೊಂಡರೆ ಇಷ್ಟಾಥ-'ರ್ ಸಿದ್ಧಿಸುತ್ತದೆಂಬ ನಂಬಿಕೆ ಭಕ್ತಾದಿಗಳಲ್ಲಿದೆ.

ಅಲಂಕಾರ: ಗವಿಮಠದ ಆವರಣದಲ್ಲಿ ಕೆರೆಯು ಅಕ್ಷರಶಃ ಸರೋವರದಂತೆ ಕಾಣುವ ಮಠದ ಕೆರೆಯು ನೋಡಲು ಸುಂದರ, ಮನೋಹರ. ನಿಸರ್ಗದ ಕಣ್ಮನ ಸೆಳೆಯುವ ಕೆರೆಯಲ್ಲಿ ಸುಂದರ ಮಧುವಣಗಿತ್ತಿಯಂತೆ ಶೃಂಗಾರಗೊಂಡ ತೆಪ್ಪವು ದೈವದ ತೊಟ್ಟಿಲಿನಂತೆ ತೆಲುತ್ತ ಗವಿಸಿದ್ಧೇಶ್ವರನ ಭವ್ಯ ಮೂರ್ತಿಯನ್ನು ತನ್ನ ಮಡಿಲಲ್ಲಿ ಇರಿಸಿಕೊಂಡು ಸಾಗಿದಾಗ ಭಕ್ತರು ಕೈ ಮುಗಿದು ಭಕ್ತಿ ಸಮರ್ಪಿಸಿದರು.

ಜನ ತಮ್ಮ ಮೊಬೈಲ್ ಫೋನ್‌ಗಳಲ್ಲಿ ಆ ದೃಶ್ಯಾವಳಿಗಳನ್ನು ಸೆರೆ ಹಿಡಿದರು. ಬಸವಪಟ ಆರೋಹಣ: ಗುರುವಾರ ಮಧ್ಯಾಹ್ನ ಬಸವಪಟ ಆರೋಹಣ ಮೂಲಕ ಜಾತ್ರೆಯ ಸಕಲ ಕಾರ್ಯಕ್ರಮಗಳಿಗೆ ವಿದ್ಯುಕ್ತವಾಗಿ ಚಾಲನೆ ದೊರೆಯಿತು. ಭಕ್ತರು ಸೇರಿಕೊಂಡು ನಂದಿ, ಈಶ್ವರ, ಸೂರ್ಯ, ಚಂದ್ರ, ವರುಣ, ಪ್ರಣವ ಮಂತ್ರವಿರುವ ಬಸವಪಟಕ್ಕೆ ಭಕ್ತರು ಪೂಜೆ ಸಲ್ಲಿಸಿ, ನೈವೇದ್ಯ ಮಾಡಿ ಆ ಬಳಿಕ ಅದನ್ನು ಗವಿಮಠದ ಕರ್ತೃ ಗದ್ದುಗೆಯ ಸುತ್ತ ಐದು ಸಾರಿ ಪ್ರದಕ್ಷಿಣೆ ಹಾಕಿದರು.

# ಕಾರುಣ್ಯ ಆಶ್ರಮದಲ್ಲಿ ಸಿಂಧನೂರು ನಗರಾಭಿವೃದ್ಧಿ ಪ್ರಾಧಿಕಾರದಿಂದ ಶಾಸಕರಾದ ಹಂಪನಗೌಡ ಬಾದರ್ಲಿ ಅವರ 75ನೇ ವರ್ಷದ ಜನ್ಮದಿನ ಆಚರಣೆ

ನೈಜ್ಯ ದೆಸೆ ನ್ಯೂಸ್

**ಸಿಂಧನೂರು: 02 ಜ ಸಿಂಧನೂರು ನಗರಾಭಿವೃದ್ಧಿ ಪ್ರಾಧಿಕಾರದಿಂದ ಶಾಸಕರಾದ ಹಂಪನಗೌಡ ಬಾದರ್ಲಿ ಅವರ 75ನೇ ವರ್ಷದ ಜನ್ಮದಿನ ಸಮಾರಂಭ ಕಾರ್ಯಕ್ರಮವನ್ನು ನಗರದ ಒಳಬಳ್ಳಾರಿ ರಸ್ತೆಯಲ್ಲಿರುವ ಕರ್ನಾಟಕ ಸರ್ಕಾರದ ರಾಜ್ಯ ಪ್ರಶಸ್ತಿ ಪುರಸ್ಕೃತ ಸಂಸ್ಥೆ ಯಾದ ಶ್ರೀಮಠ ಸೇವಾ ಟ್ರಸ್ಟ್ (ರಿ) ಹರೇಟನೂರು ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಕಾರುಣ್ಯ ನೆಲೆ ವೃದ್ಧಾಶ್ರಮ ಹಾಗೂ ವಯಸ್ಕರ ಬುದ್ಧಿಮಾಂದ್ಯ ಆಶ್ರಮದಲ್ಲಿ ಮಹಾಪ್ರಸಾದ ಸೇವೆ ಹಣ್ಣು ಹಂಪಲುಗಳನ್ನು ಹಾಗೂ ಆಶ್ರಮದ ಆಶ್ರಯದಾತರುಗಳಿಗೆ ಬೆಡ್ ಶೀಟ್ ಗಳನ್ನು ವಿತರಿಸುವ ಮೂಲಕ ಅರ್ಥಪೂರ್ಣವಾಗಿ ನೆರವೇರಿಸಲಾಯಿತು.**



ಈ ಕಾರ್ಯಕ್ರಮದಲ್ಲಿ ಶ್ರೀಮಠ ಸೇವಾ ಟ್ರಸ್ಟ್ ನ ಪದಾಧಿಕಾರಿಗಳು ಆಶ್ರಮದ ವತಿಯಿಂದ ಹಂಪನಗೌಡ ಪಾದದಲ್ಲಿ ಅವರನ್ನು ಸನ್ಮಾನಿಸಿ ಶುಭ ಹಾರೈಸಿದರು. ಈ ಕಾರ್ಯಕ್ರಮದಲ್ಲಿ ಶಾಸಕರಾದ ಹಂಪನಗೌಡ ಬಾದರ್ಲಿ ಮಾತನಾಡಿ ನಮ್ಮ ಊರಿನ ಪಕ್ಕದಲ್ಲೇ ನಮ್ಮ ಪಂಚಾಯತ್ ವ್ಯಾಪ್ತಿಗೆ ಬರುವ ಕುಗ್ರಾಮವಾದ ಹರೇಟ ನೂ-ರಿನ ಬಡಜಂಗಮ ಹಾಗೂ ಆದಿಶಕ್ತಿ ದ್ಯಾವಮ್ಮ ದೇವಿಯ ಅರ್ಚಕರಾದ ನಮ್ಮ ಆಪ್ತರು ಗುರುಗಳಾದ ಅಮರಯ್ಯ ಸ್ವಾಮಿಯವರು ಹಾಗೂ ಅವರ ಕುಟುಂಬದ ಸದಸ್ಯರು ಹಲವು ವರ್ಷಗಳ ಕಾಲ ಗ್ರಾಮ ಪಂಚಾಯತ್ ಸದಸ್ಯರುಗಳಾಗಿ ನಿರಂತರ ಸಮಾಜ ಸೇವೆಗೆ ತಮ್ಮನ್ನು ತಾವು ಮುಡಿಪಾಗಿಟ್ಟಿರುವ ಈ ಕುಟುಂಬ ಸಿಂಧನೂರು ಪಟ್ಟಣದಲ್ಲಿ ಹಲವು ವರ್ಷಗಳಿಂದ ನೆಲೆ ಇಲ್ಲದ ಅನಾಥರು ಮತ್ತು ಕುಟುಂಬದಿಂದ ಹಾಗೂ ಸಮಾಜದಿಂದ ತಿರಸ್ಕೃತಗೊಂಡವರಿಗೆ ತಮ್ಮ ಜೋಳಿಗೆಯ ಮೂಲಕ ಬದುಕು ಕಟ್ಟಿ ಕೊಟ್ಟಿರುವುದು ಮರುಗಳನ್ನು ಲಾಲನೆ ಪೋಷಣೆ ಮಾಡುತ್ತಿರುವುದು ಮಾನವೀಯತೆಗೆ ಮೆರಗು ತಂದಿದೆ.

ಮತ್ತು ಈ ಸಂಸ್ಥೆಯು 2023ನೇ ಇಸ್ವಿಯಲ್ಲಿ ಇಡೀ ರಾಜ್ಯದಲ್ಲಿ ಏಕೈಕ ಉತ್ತಮ ಸಂಸ್ಥೆಯಾಗಿ ನಮ್ಮ ಸರ್ಕಾರದಲ್ಲಿ ಪ್ರಶಸ್ತಿ ಸ್ವೀಕ-ರಿಸಿರುವುದು ನಮ್ಮ ಸಿಂಧನೂರಿನ ಕರುಣಾಮಯಿ ಸಂಸ್ಕೃತಿಗೆ ಗೌರವ ಬಂದಂತಾಗಿದೆ. ನಾನು ನಮ್ಮ ಸರ್ಕಾರದ ಮೂಲಕ ಆಶ್ರಮದ ಬಹು ಮುಖ್ಯ ಬೇಡಿಕೆಯಾದ ಸ್ವಂತ ಜಾಗ ಹಾಗೂ ಅನುದಾನ ಕೊಡಿಸುವಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ. ಕಾರುಣ್ಯಾಶ್ರಮ ನಾಡಿನ ಉತ್ತಮ ಮಾದರಿ ಸೇವಾ ಸಂಸ್ಥೆಯಾಗಿರುವುದು ನಮ್ಮೆಲ್ಲ-ರಿಗೆ ಹೆಮ್ಮೆ. ಇಂತಹ ಸೇವಾ ಕಾರ್ಯಗಳಿಗೆ ಪ್ರತಿಯೊಬ್ಬರೂ ಕೂಡ ಸಹಾಯ ಸಹಕಾರ ಮಾಡಲು ನನ್ನ ವಿನಂತಿ. ಇನ್ನೂ ಅನೇಕ ನೊಂದ ಅನಾಥ ಜೀವಿಗಳ ಬಾಳಿಗೆ ನಾಡಿಮಿಡಿತವಾಗಿ ನಮ್ಮ ಕಾರುಣ್ಯ ಆಶ್ರಮವು ಬೆಳಕು ನೀಡಲಿ ಸದಾವಕಾಲ ನಾವು ಕಾರುಣ್ಯ ಆಶ್ರಮದ ಸೇವೆಯ ಜೊತೆಗಿರುತ್ತೇವೆ ಎಂದು ಮಾತನಾಡಿ ಆಶ್ರಮದ ಸೇವೆಯನ್ನು ಶ್ಲಾಘಸಿ ಆಶ್ರಯದಾತರುಗಳಿಗೆ ಬೆಡ್ ಸೀಟ್ ಹಣ್ಣು ಹಂಪಲುಗಳನ್ನು ವಿತರಿಸಿಸಿದರು.

ಈ ಕಾರ್ಯಕ್ರಮದಲ್ಲಿ ವೇ.ಮೂ. ಅಮರಯ್ಯ ಸ್ವಾಮಿ ಹಿರೇಮಠ ಹರೇಟನೂರು ಸಂಸ್ಥಾಪಕರು ಕಾರುಣ್ಯ ಆಶ್ರಮ ಕೆ. ಚಿದಾನಂದಪ್ಪ ಗೌಡ ಕಾರ್ಯದರ್ಶಿಗಳು ಕಾರುಣ್ಯ ಆಶ್ರಮ. ಕ-ರಿಬಸಯ್ಯಸ್ವಾಮಿ ಹಿರೇಮಠ ಉಪಾಧ್ಯಕ್ಷರು ಕಾರುಣ್ಯ ಆಶ್ರಮ. ಮಲ್ಲಿಕಾರ್ಜುನ ಸ್ವಾಮಿ ಕರಡಕಲ್ ಸದಸ್ಯರು ಕಾರುಣ್ಯ ಆಶ್ರಮ. ವೈ. ನರೇಂದ್ರನಾಥ ಸದಸ್ಯರು ನಗರಾಭಿವೃದ್ಧಿ ಪ್ರಾಧಿಕಾರ ಸಿಂಧನೂರು. ಖಾಜಿ ಮಲ್ಲಿಕ್ ಸದಸ್ಯರು ನಗರಾಭಿವೃದ್ಧಿ ಪ್ರಾಧಿಕಾರ. ಬಸವರಾಜ ಹಿರೇಗೌಡ್ರು ಮಾಜಿ ಜಿ. ಪಂ. ಸದಸ್ಯರು. ಆರ್. ಸಿ. ಪಾಟೀಲ್ ಕಾರ್ಯದರ್ಶಿಗಳು ಪಾಟೀಲ್ ಶಿಕ್ಷಣ ಸಂಸ್ಥೆ. ಸಂಜಯ್ ಪಾಟೀಲ್.ಬಸವರಾಜ ಸಾಹುಕಾರ. ಶಿವನಗೌಡ ಎಲೆಕೂಡ್ಲಿಗಿ.

ಮೌಲಪ್ಪ ಮಾಡಸಿರವಾರ. ಕ್ರಾಂತಿ ಗೌಡ ಗುತ್ತೇದಾರರು ಬಾದರ್ಲಿ.ಮಮತಾ ಮೌಲಪ್ಪ ಮಾಡಸಿರಿವಾರ ಸದಸ್ಯರು ನಗರಾಭಿವೃದ್ಧಿ ಪ್ರಾಧಿಕಾರ. ಅಮರೇಗೌಡ ಮಲ್ಲಾಪುರ ಸಂಸ್ಥಾಪಕರು ವನಸಿರಿ ಫೌಂಡೇಶನ್. ಸುರೇಶ ಎಲೆಕೂಡ್ಲಿಗಿ. ಯಮನೂರಪ್ಪ ಪರಾಪುರ. ಹನುಮಂತ ಹೊಸಳ್ಳಿ. ನಾಗರಾಜ ಮುದ್ದಾಪುರ ಚಿದಾನಂದಯ್ಯ ಸ್ವಾಮಿ ಆಲಬನೂರು. ಕೆ. ವಾಮದೇವ ಹರೇಟನೂರು.ಬಸವರಾಜ ಭೀಮನಗೌಡ್ರು ಗೊಣ್ಣಿಗನೂರು. ವೀರಭದ್ರಗೌಡ ಗಿಣಿವಾರ. ಹಾಗೂ ಆಶ್ರಮದ ಕಾರ್ಯಾಧ್ಯಕ್ಷರಾದ ಡಾ.ಚನ್ನಬಸಯ್ಯಸ್ವಾಮಿ ಹಿರೇಮಠ ಹರೇಟನೂರು. ಆಶ್ರಮದ ಸಿಬ್ಬಂದಿಗಳಾದ ಸುಜಾತ ಮಲದಗುಡ್ಡ. ಸಿದ್ದಯ್ಯ ಸ್ವಾಮಿ ಮರಿಯಪ್ಪ ಜ್ಯೋತಿ ಹಾಗೂ ಹಂಪನಗೌಡ ಅಭಿಮಾನಿ ಬಳಗದ ನೂರಾರು ಕಾರ್ಯಕರ್ತರು ಭಾಗವಹಿಸಿ ಶುಭ ಹಾರೈಸಿದರು.